
# ಮಹಾಪಿರಮಿಡ್ ಮತ್ತು ಸತ್ಯವೇದ

## ಅಧ್ಯಯನ # 20



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 20

# ಮಹಾಪಿರಮಿಡ್ ಮತ್ತು ಸತ್ಯವೇದ

<u>ದಯವಿಟ್ಟು ಗಮನಿಸಿ:</u> **ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಈ ದಿನ ನಾವು ಪ್ರಪಂಚದ **"ಏಳು ಅದ್ಭುತಗಳಲ್ಲಿ"** ಒಂದಾದ **ಗಿಜಾವಿನ ಮಹಾ ಪಿರಮಿಡ್‌ನ್ನು** ಕುರಿತು ಅಭ್ಯಾಸ ಮಾಡಲಿದ್ದೇವೆ. – ಇದು ಐಗುಪ್ತದಲ್ಲಿದೆ.

**ಈ ಅದ್ಭುತಕ್ಕೂ ಸತ್ಯವೇದಕ್ಕೂ ಇರುವ ಅದ್ಭುತವಾದ ಸಂಬಂಧವನ್ನು ಗಮನಿಸಿ!!**

ಇದು "ಪ್ರಪಂಚದ ಪ್ರಾಚೀನ ಏಳು ಅದ್ಭುತ"ಗಳಲ್ಲಿ ಒಂದಾಗಿತ್ತು. ಹಾಗೂ ಇವುಗಳಲ್ಲಿ **"ಬ್ಯಾಬಿಲೋನಿನ ತೂಗವ ತೋಟ"**ವು ಒಂದು. ಕಾಲಕ್ರಮೇಣ ಈ ಏಳು **"ಪ್ರಾಚೀನ"** ಅದ್ಭುತಗಳಲ್ಲಿ **ಆರು** ಹಾಳಾಗಿ ಕಣ್ಮರೆಯಾಗಿವೆ.



"ಪ್ರಾಚೀನ ಅದ್ಭುತಗಳಲ್ಲಿ" ಈ **ಮಹಾ ಪಿರಮಿಡ್** ಮಾತ್ರ ಉಳಿದುಕೊಂಡಿದೆ ಮತ್ತು ಈಗ ಪ್ರಪಂಚದ ಏಳು ಅದ್ಭುತಗಳಲ್ಲಿ ಇದೂ ಒಂದು ಅದ್ಭುತವಾಗಿ ಎಣಿಸಲಾಗಿದೆ. ಆದರೆ, ನಮ್ಮ ಈ ಪಿರಮಿಡ್ ಅಭ್ಯಾಸವು ಒಂದು ಇತಿಹಾಸವಾಗಿದೆ, ಮಾತ್ರವಲ್ಲ
ಇನ್ನೂ ಹೆಚ್ಚಾಗಿದೆ ಮತ್ತು ... ಬಹಳ ಅದ್ಭುತವಾಗಿದೆ!

**ಹೌದು! ಈ ಪಿರಮಿಡ್‌ಗೂ ಸತ್ಯವೇದಕ್ಕೂ ಸಂಬಂಧವಿದೆ!**

**ನೀವು ಇದು ಹೇಗೆ ಮತ್ತು ಯಾವ ರೀತಿಯಲ್ಲಿ ಸಾಧ್ಯವೆಂದು ಆಶ್ಚರ್ಯಪಡುತ್ತಿರಬಹುದು?**

ಒಳ್ಳೆಯದು, ಕೆಳಗಿನ ವಾಕ್ಯವನ್ನು ಓದೋಣ –

**ಯೆಶಾಯ 19:19-20**


**"ಆ ದಿನದಲ್ಲಿ ಐಗುಪ್ತದೇಶದ ಮಧ್ಯೆ ಯೆಹೋವನಿಗೆ ಒಂದು ಯಜ್ಞಪೀಠವೂ ದೇಶದ ಎಲ್ಲೆಯಲ್ಲಿ ಯೆಹೋವನಿಗೆ ಒಂದು ಸ್ಥಂಭವೂ ಇರುವುವು. ಅವು ಐಗುಪ್ತ ದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವವು. ಹಿಂಸಕರ ದೆಸೆಯಿಂದ ಯೆಹೋವನನ್ನು ಕೂಗಿಕೊಳ್ಳಲು ಆತನು ಅವರಿಗಾಗಿ ಹೋರಾಡುವ ಶೂರನಾದ ರಕ್ಷಕನನ್ನು ಕಳುಹಿಸಿ ಅವರನ್ನುದ್ಧರಿಸುವನು."**

ಹೌದು! ಯೆಶಾಯನ ಈ ಕುತೂಹಲವುಳ್ಳ ಪ್ರವಾದನೆಯನ್ನು
**....ಸುಮಾರು 150 ವರ್ಷಗಳ**
ಹಿಂದಿನವರೆಗೂ ಸ್ವಲ್ಪ ಮಾತ್ರ ಅರ್ಥಮಾಡಿಕೊಳ್ಳಲಾಗಿತ್ತು.
ಐಗುಪ್ತದಲ್ಲಿ ಸತ್ಯವೇದದ ದೇವರಾದ – **ಸೇನಾಧೀಶ್ವರನಾದ ಯೇಹೋವನಿಗೆ** ಇರುವ ಒಂದು "**ಯಜ್ಞಪೀಠವನ್ನು**" ಕುರಿತು ಈ ಪ್ರವಾದನೆ ಮಾತನಾಡುತ್ತದೆ!!!

"ಐಗುಪ್ತ ದೇಶದ ಮಧ್ಯೆ" ಇರುವ "ಯಜ್ಞಪೀಠ" ಮತ್ತು "ಸ್ತಂಭ" ಎಂದರೇನು?
ಯೆಶಾಯ ಹೇಳಿದ ಐಗುಪ್ತ ದೇಶದ ಯಜ್ಞಪೀಠವು ಬೇರೆ ಯಾವುದೂ ಅಲ್ಲ ಅದುವೇ ಗಿಜಾವಿನ ಮಹಾ ಪಿರಮಿಡ್!

**ನಿಮಗೆ ಆಶ್ಚರ್ಯವಾಗಿದೆಯೇ? ಇದು ಹೇಗೆಂದು ನಾವು ನೋಡೋಣ!!!**

ಆದರೆ ಅದಕ್ಕೆ ಮೊದಲು, ಈ ಮಹಾ ಪಿರಮಿಡ್‌ನ ವೈಶಿಷ್ಟ್ಯವನ್ನು ಕುರಿತು
ಕಲಿಯೋಣ ಮತ್ತು ಇದರ ಮಹಾವೈಭವ
ಮತ್ತು ವಿವರಣೆಯನ್ನು ಕುರಿತು ಪರಿಚಯ ಮಾಡಿಕೊಳ್ಳೋಣ–




☞ ಮೊದಲನೆಯದಾಗಿ, ಈ ಮಹಾ ಪಿರಮಿಡ್‌ನ ಎತ್ತರ **486** ಅಡಿ ಈ ದಿನದ ಸುಮಾರು **40-45** ಬಹುಮಹಡಿ ಕಟ್ಟಡಗಳಷ್ಟು ಎತ್ತರ!

☞ ಇದರ **4** ಪಾದ ಬಾಹುಗಳ ಪ್ರತಿಯೊಂದರ ಉದ್ದ **764** ಅಡಿ ಅಂದರೆ ಪಿರಮಿಡ್ ನ ಪಾದವು **764** ಅಡಿಯ ಚೌಕ

☞ ಇದು **13** ಎಕರೆ ಭೂಮಿಗಿಂತ ಅಧಿಕವಾಗಿ ವ್ಯಾಪಿಸಿಕೊಂಡಿದೆ!! ಸ್ವಲ್ಪ ಊಹಿಸಿ ನೋಡಿರಿ!

☞ ಇದನ್ನು “ಅತಿದೊಡ್ಡ” ಅಥವಾ ಮಹತ್ತಾದ ಪಿರಮಿಡ್ ಎಂದು ಕರೆಯಲಾಗಿದೆ. ಏಕೆಂದರೆ ಇದರ ಕಾರ್ಯಕೌಶಲ ಐಗುಪ್ತದ ಬೇರೆ ಎಲ್ಲಾ ಪಿರಮಿಡ್‌ಗಳಿಗಿಂತ ಉತ್ತಮ ಮತ್ತು ಮಿಗಿಲಾಗಿದೆ.

☞ ಇದರಲ್ಲಿರುವ ಕಟ್ಟಡದ ವಸ್ತುಗಳು ಇಂಗ್ಲೆಂಡಿನಲ್ಲಿ ಕ್ರೈಸ್ತತ್ವ ಆರಂಭವಾದಾಗಿನಿಂದ ಇರುವ ಎಲ್ಲಾ ಮಂದಿರಗಳು, ಸಭೆಗಳು ಮತ್ತು ಆಲಯಗಳಿಗಿಂತ ಹೆಚ್ಚಾಗಿದೆ!

ಇದಲ್ಲದೆ, ಐಗುಪ್ತದ ಬೇರೆ ಎಲ್ಲಾ ಪಿರಮಿಡ್‌ಗಳಿಗಿಂತ ಇದು ವಿಭಿನ್ನವಾಗಿದೆ.
ಇದು ಪರೋಹನ ಸಮಾಧಿಯಲ್ಲ.
ಇದರಲ್ಲಿ ಕ್ರಮವಾದ ಮಾರ್ಗಗಳು ಮತ್ತು ಕೋಣೆಗಳಿವೆ.

ಪ್ರತಿಯೊಂದು ಕಟ್ಟಡದ ಕಲ್ಲು ಸರಾಸರಿ 16 **ಟನ್ನುಗಳಷ್ಟು ತೂಕವಿದೆ** ಮತ್ತು ಪ್ರತಿ ಕಲ್ಲಿನ ನಡುವೆ ಇರುವ ಸಂಧಿಯು (ಜಾಗವು) **“ಹಾಳೆಯ ದಪ್ಪ”ಕ್ಕಿಂತಲೂ** ಹೆಚ್ಚಾಗಿಲ್ಲ ಮತ್ತು ನುಣುಪಾದ ಸಿಮೆಂಟಿನಿಂದ ಲೇಪಿಸಲಾಗಿದೆ.

**ಇಷ್ಟು ದೊಡ್ಡ ಕಲ್ಲುಗಳನ್ನು ಅವರು ಹೇಗೆ ಹೊತ್ತು ತಂದರು?**

**ಮತ್ತು ಅದರದರ ಜಾಗಕ್ಕೆ ಹೇಗಿಟ್ಟರು?**

**ಇದೊಂದು ದೊಡ್ಡ ಆಶ್ಚರ್ಯವಾಗಿದೆ!**

ಒಂದೇ ಒಂದು ಕಲ್ಲಿನ ತೂಕವನ್ನು ಲೆಕ್ಕ ಹಾಕಿದಾಗ, ಅದು 880ಟನ್ ಅಥವಾ **880,000 ಕೆ.ಜಿ.** ಯಷ್ಟು ಭಾರವಿತ್ತು!!

**ಸ್ವಲ್ಪ ಊಹಿಸಿ ನೋಡಿರಿ!**



ಈ ಪಿರಮಿಡ್ ನಲ್ಲಿ **30** ಅಡಿ ಉದ್ದದ ಕಲ್ಲುಗಳಿವೆ!!! ಇಂದಿನ ಅಧಿಕವಾದ ಯಾಂತ್ರಿಕ ಲೋಕದಲ್ಲೂ ಸಹ **ಎರಡು** ಸಮತಲಗಳನ್ನು **30** ಅಡಿ ಉದ್ದ ಮಾಡಲು ಯಂತ್ರೋಪಕರಣಗಳಿಲ್ಲ!!

ಇದು **4000 ವರ್ಷಗಳ ಹಿಂದೆ** ಕಟ್ಟಲಾಯಿತು ಎಂದು ಹೇಳಲಾಗುತ್ತಿದೆ... ಮತ್ತು ಇದನ್ನು **ಕ್ರಿ.ಪೂ. 2170 ರಲ್ಲಿ** ಕಟ್ಟಿರಬಹುದೆಂದು ಅಂದಾಜು ಮಾಡಲಾಗಿದೆ.

ಇದೊಂದು ಪಿರಮಿಡ್‌ನ ತೂಕವು ಸುಮಾರು **60 ಲಕ್ಷ** (6 **ದಶಲಕ್ಷ) ಟನ್‌ಗಳಷ್ಟು** ಇದೆಯೆಂದು ಅಂದಾಜು ಮಾಡಲಾಗಿದೆ ಮತ್ತು ಇದನ್ನು ತೆಗೆಯಲು ಅಥವಾ ನಾಶಮಾಡಲು ಒಂದೊಂದು ಸಾವಿರ ಟನ್ ತೂಕ ಹೊರುವ **6000** ರೈಲು ಬಂಡಿ, ಬೇಕಾಗುತ್ತದೆ.

**ಈ ವಿಷಯವನ್ನು ಸ್ವಲ್ಪ ಊಹಿಸಿ ನೋಡಿರಿ!!**

ಸತ್ಯಾಂಶವೇನೆಂದರೆ, ಒಂದು ವೇಳೆ ಐಗುಪ್ತದವರು ಈ ಕಟ್ಟಡವನ್ನು ನಾಶ ಮಾಡಲು ಯೋಜನೆ ಮಾಡಿದರೆ ಐಗುಪ್ತದ ಎಲ್ಲಾ ಸಂಪತ್ತು ಕೆಲಸಗಾರರಿಗೆ ಕೂಲಿ ನೀಡಲು ಸಾಲದಾಗುತ್ತದೆ.

**ಇದರಿಂದ ಸ್ಪಷ್ಟವಾಗುವುದೇನೆಂದರೆ ಇದರ ಉದ್ದೇಶವು ಅತ್ಯಧಿಕವಾಗಿ ಬಾಳಿಕೆ ಬರುವಂತೆ ಮತ್ತು ನಿತ್ಯವಾದ ಸ್ಮಾರಕವಾಗಿರುವಂತೆ ಕಟ್ಟಲಾಗಿದೆ.**


ಈ ಅತಿ ದೊಡ್ಡ ಪಿರಮಿಡ್ ಅನ್ನು ಮೆಲ್ಕಿಜೆದೇಕನು ಕಟ್ಟಿಸಿದನು ಎಂದು ಭಾವಿಸಲಾಗಿದೆ. ಈತನು "ಕುರುಬರ ರಾಜರು"ಗಳ ವಂಶಾವಳಿಯಲ್ಲಿ ಹುಟ್ಟಿದವನು ಇವರನ್ನು "ಹೈಕ್‌ಸಾಸ್" **(Hyksos)** ಎಂದು ಕರೆಯಲಾಗುತ್ತದೆ. ಈತನು "ರಾಜ ಮತ್ತು ಯಾಜಕನಾಗಿದ್ದು" ಅಬ್ರಹಾಮನನ್ನು ಆಶೀರ್ವದಿಸಿ ಆತನಿಂದ ದಶಮಭಾಗವನ್ನು ತೆಗೆದುಕೊಂಡವನು ಆದಿಕಾಂಡ 14:18–20.

ಗೀಜಾದ ಈ ಮಹಾ ಪಿರಮಿಡ್ **ಗಣಿತ, ಭೂಗೋಳಶಾಸ್ತ್ರ** ಮತ್ತು **ಖಗೋಳಶಾಸ್ತ್ರದ** ಅತಿದೊಡ್ಡ ನಿಯಮಗಳನ್ನು ಕಲಿಸುವುದನ್ನು ನೋಡಬಹುದು!

ಈಗ ನಾವು ಇದರ ಅನೇಕ ಜ್ಞಾನದ "ಅದ್ಭುತ"ಗಳಲ್ಲಿ ಕೆಲವನ್ನು ನೋಡೋಣ –

# ಗಣಿತ ಶಾಸ್ತ್ರ

ಮಹಾಪಿರಮಿಡ್ ಗಣಿತದ ಅತಿ ಮುಖ್ಯ ನಿಯಮವಾದ ಪೈ(π) ಪ್ರಮಾಣವನ್ನು ವ್ಯಕ್ತಪಡಿಸುತ್ತದೆ.!




**ಈ "ಪೈ" (π) ಪ್ರಮಾಣವೆಂದರೇನು ?**

ಇದು ವೃತ್ತದ (circumference) ಸುತ್ತಳತೆ ಮತ್ತು ಅದರ ವ್ಯಾಸದ (Diameter) ಸಂಬಂಧವನ್ನು ಸೂಚಿಸುತ್ತದೆ.


ಗಣಿತ ಶಾಸ್ತ್ರಜ್ಞರು ಈ ಅನುಪಾತ (ಪ್ರಮಾಣ)ವನ್ನು ಗ್ರೀಕ್ ವರ್ಣಮಾಲೆಯ ಹದಿನಾರನೆಯ ಅಕ್ಷರವಾಗಿ ಸೂಚಿಸುತ್ತಾರೆ "ಪೈ" ("Pi" π)

**ಈ ದಿನ ಇದರ ಬೆಲೆ ನಮಗೆ ಗೊತ್ತಿರುವ ಹಾಗೆ 3.141592**

ಈ ನಿಯಮವನ್ನು ಕ್ರಿಸ್ತನ ನಂತರ ಹದಿನಾರನೆಯ ಶತಮಾನದಲ್ಲಿ ಮನುಷ್ಯನು ಕಂಡುಹಿಡಿದನು –

ಮಹಾ ಪಿರಮಿಡ್ ಅನ್ನು ಕಟ್ಟಿ ಮುಗಿಸಿದ 2700 ವರ್ಷಗಳ ಅನಂತರ –

**ನಿಜವಾಗಿಯೂ ಇದು ಎಂತಹ ಆಶ್ಚರ್ಯ!!**





ಒಂದು ವೇಳೆ ಅತಿ ದೊಡ್ಡ ಪಿರಮಿಡ್‌ನ **ಎತ್ತರವನ್ನು** ತ್ರಿಜ್ಯ (Radius) ವಾಗಿ ತೆಗೆದುಕೊಂಡು **ವೃತ್ತವನ್ನು** ರಚಿಸಿದರೆ ಪಿರಮಿಡ್‌ನ ಸುತ್ತಳತೆಯ **ನಾಲ್ಕು ಮೂಲೆಗಳನ್ನು** ಮುಟ್ಟುತ್ತದೆ.

ಇದು ಸರಿಸಾಟಿಯಿಲ್ಲದ (unique) **51° 51'**

(51 ಡಿಗ್ರಿ 51 ನಿಮಿಷಗಳು ಕೋನದಲ್ಲಿ ಪಿರಮಿಡ್ ಕಟ್ಟಲಾಗಿದೆ. ಇದು “**ಪೈ**”(π)ನ ನಿಯಮವನ್ನು ವ್ಯಕ್ತಪಡಿಸುತ್ತದೆ!

# ಭೂಗೋಳ ಶಾಸ್ತ್ರ

ಮಹಾ ಪಿರಮಿಡ್‌ನ ಸ್ಥಾನ (ಅಥವ ಅದರ ನೆಲೆ) **ನಾಲ್ಕು ಅಂಚು** ಅಥವಾ **ಕೋನಗಳು** ನಾಲ್ಕು ದಿಕ್ಕುಗಳನ್ನು ಅಥವಾ ದಿಕ್ಸೂಚಿಯ ಬಿಂದುಗಳನ್ನು ಸರಿಯಾಗಿ ಆಶ್ಚರ್ಯವಾಗಿ ತೋರಿಸುತ್ತದೆ.!




ಇದು ಅತಿ ದೊಡ್ಡ ವಾಸ್ತು ಶಿಲ್ಪಿ ತಾನೇ ನಿರ್ಮಿಸಿದ ಅತಿದೊಡ್ಡ ಪಿರಮಿಡ್‌ನ ದಿಕ್ಸೂಚಿಯ ನಾಲ್ಕು ಬಿಂದುಗಳ ಸ್ಥಾನ ಮತ್ತು ದಿಕ್ಕನ್ನು ನಮಗೆ ತೋರಿಸುವಂತೆ ಕಾಣುತ್ತದೆ!!


**ನಂತರ ನಾವು ಪಿರಮಿಡ್‌ನ ಇನ್ನೊಂದು ದಿಗ್ಭ್ರಮೆಗೊಳಿಸುವಂತಹ ವಿಷಯವನ್ನು ನೋಡುತ್ತೇವೆ!**

ನಮಗೆಲ್ಲಾ ಗೊತ್ತಿರುವಂತೆ ಭೂಮಿಯು ಗುಂಡಾಗಿದೆ ಮತ್ತು ವೃತ್ತಾಕಾರದಲ್ಲಿದೆ. ಇದನ್ನು **ಯೆಶಾಯ 40:22** ರಲ್ಲಿ ಓದುತ್ತೇವೆ.

ಒಂದು ವೃತ್ತಾಕಾರವನ್ನು ರಚಿಸಲು ಒಬ್ಬರಿಗೆ ಕೈವಾರದ ಅಗತ್ಯವಿದೆ ಮತ್ತು ಕೈವಾರದೊಂದಿಗೆ ವೃತ್ತಾಕಾರವನ್ನು ರಚಿಸುವಾಗ, ಆ ಕೈವಾರವು ಒಂದು ಸ್ಥಳದಲ್ಲಿ ನಿಲ್ಲಿಸಬೇಕು. ಆ ಸ್ಥಳವು ವೃತ್ತದ ಮಧ್ಯ ಬಿಂದುವಾಗಿರುತ್ತದೆ.

**ಈಗ ಭೂಮಿಯು ವೃತ್ತಾಕಾರದಲ್ಲಿದ್ದರೆ ... ಅದಕ್ಕೆ ಮಧ್ಯಬಿಂದುವಿರಬೇಕು.**

**ಯಾವ ಅಥವಾ ಎಲ್ಲಿ ಆ ಮಧ್ಯ ಬಿಂದು ಇದೆ?**




**ಇದು ಬೇರೆ ಎಲ್ಲೂ ಇಲ್ಲ, ಇದೇ ಮಹಾ ಪಿರಮಿಡ್ ನಿಂತಿರುವ ಸ್ಥಳ.**


ಹೌದು! ಇದು ಗ್ರೀನ್‌ವಿಚ್ ಅಥವಾ ಪ್ಯಾರಿಸ್ ಗಿಂತ ಅಧಿಕವಾಗಿ ಅಂತರಾಷ್ಟ್ರೀಯ ದಿನಾಂಕ ರೇಖೆಯಾಗಲು ಸೂಕ್ತವಾಗಿದೆ.

ಇದಲ್ಲದೆ ಮಹಾ ಪಿರಮಿಡ್‌ನ ಮಧ್ಯರೇಖೆಯಲ್ಲಿ ಅಧಿಕವಾಗಿ ಭೂಮಿ ಮತ್ತು ಕಡಿಮೆಯಾಗಿ ಸಮುದ್ರವಿರುವುದನ್ನು ನೋಡಬಹುದು.

ಆದ್ದರಿಂದ ಇದು ಭೂಮಿಯ ಸ್ವಾಭಾವಿಕ ಸೊನ್ನೆ (ಶೂನ್ಯ) ಮಧ್ಯರೇಖೆಯಾಗಿದೆ ಮತ್ತು ಭೂಮಿಯ ಸಮಯವನ್ನು ಲೆಕ್ಕ ಹಾಕುವುದಕ್ಕೆ ಇದು ಉಪಯುಕ್ತವಾಗಿದೆ.

ಹೌದು! ಈ ದಿನಗಳಲ್ಲಿ ಉಪಯೋಗಿಸುವ ಗ್ರೀನ್‌ವಿಚ್ ಮೀನ್ ಟೈಮ್ **(GMT)** ಲೆಕ್ಕಾಚಾರಕ್ಕಿಂತಲೂ ಇದು ಬಹಳ ಉಪಯುಕ್ತವಾಗಿದೆ.

**ಗ್ರೀನ್‌ವಿಚ್‌ನಿಂದ ಉದ್ದರೇಖಾಂಶ**




**ಕೆಳ ಭಾಗದಲ್ಲಿರುವ ಐಗುಪ್ತವು ಇಡೀ ಪ್ರಪಂಚದ ಭೂ ಮೇಲ್ಮೈಯ ಭೌಗೋಳಿಕ ಕೇಂದ್ರವಾಗಿದೆ.**

ಗಮನಿಸಬೇಕಾದ ಮತ್ತೊಂದು ಕುತೂಹಲಕಾರಿ ಸತ್ಯಾಂಶವೇನೆಂದರೆ ಮಹಾಪಿರಮಿಡ್ ಭೂಮಿಯ ಎರಡು ದೊಡ್ಡ ಭೂ ಪ್ರದೇಶಗಳ ಮಧ್ಯದಲ್ಲಿದೆ. ಮೆಡಿಟರೇನಿಯನ್ ನ ಪೂರ್ವಕ್ಕಿರುವ ಭೂ ಪ್ರದೇಶವನ್ನು ಓರಿಯಂಟ್**(orient)** ಎಂದು ಕರೆಯಲಾಗುತ್ತದೆ. ಮತ್ತು ಮೆಡಿಟರೇನಿಯನ್ ನ ಪಶ್ಚಿಮಕ್ಕಿರುವ ಭೂ ಪ್ರದೇಶವನ್ನು ಆಕ್ಸಿಡೆಂಟ್ **(occident)** ಎಂದು ಕರೆಯಲಾಗುತ್ತದೆ.

**ಯಾವುದೇ ಕೋನದಿಂದ ನೋಡಿದರೂ ಈ ಮಹಾ ಪಿರಮಿಡ್ ಸರಿಯಾಗಿ ಭೂಮಿಯ ಮಧ್ಯದಲ್ಲಿದೆ!!**

## ಖಗೋಳ ಶಾಸ್ತ್ರ

ಭೂಮಿಯು ಸೂರ್ಯನನ್ನು ಒಂದು ಸುತ್ತು ಸುತ್ತಲು ತೆಗೆದುಕೊಳ್ಳುವ ಸಮಯಕ್ಕೆ ಸೌರವರ್ಷ **(Solar Year)** ಎಂದು ಕರೆಯಲಾಗುತ್ತದೆ. ಜಾನ್ ಟೈಲರ್ ಎಂಬುವರು

ಮೊದ ಮೊದಲು ಸಲಹೆ ನೀಡಿದ್ದೇನೆಂದರೆ ಮಹಾಪಿರಮಿಡ್‌ನ ತಳದ ಸುತ್ತಳತೆಯು "ಸ್ಯಾಕ್ರಿಟ್ ಕ್ಯೂಬಿಟ್ಸ್" ನಲ್ಲಿ ಅಳತೆ ಮಾಡಿದಾಗ ಅದು **365.242** ಸ್ಯಾಕ್ರೆಟ್ ಕ್ಯೂಬಿಟ್ಸ್ ಎಂದು ತಿಳಿದು ಬಂತು ಅಥವಾ.... ಸರಿಯಾಗಿ ಒಂದು ಸೌರವರ್ಷ!

**ಆದ್ದರಿಂದ ಕ್ಯೂಬಿಟ್ಸ್‌ನಲ್ಲಿ ಪಿರಮಿಡ್‌ನ ಒಂದು ಸುತ್ತಳತೆಯು ಭೂಮಿ ಸೂರ್ಯನನ್ನು ಒಂದು ಸುತ್ತು ಸುತ್ತಲು ತೆಗೆದುಕೊಳ್ಳುವ ಕಾಲವನ್ನು ದಿನಗಳಲ್ಲಿ ತೋರಿಸುತ್ತದೆ!**

ನಂತರ ವಿಲಿಯಂ ಪೀಟರ್(ಪೆಟ್ರೀ) ಎಂಬುವರು ಮೊದಲನೇ ಸಾರಿ ಕಂಡು ಹಿಡಿದಿದ್ದೇನೆಂದರೆ ಅವರು ಪಿರಮಿಡ್‌ನ ಪ್ರತಿ ಹತ್ತು ಅಡಿ ಕ್ರಮಿಸಿದಂತೆಲ್ಲಾ ಲಂಭವಾಗಿ ಒಂಭತ್ತು ಅಡಿ ಎತ್ತರದಲ್ಲಿರುತ್ತಿದ್ದರು!


ಇದು ಆತನಿಗೆ ಹತ್ತರ ಘಾತ ಒಂಭತ್ತರ ಅಥವ $10^9$ ರ ಬೆಲೆ (ಅಳತೆ) ತಿಳಿಯುವಂತೆ ಮಾಡಿತು.

ಇದಾದ ನಂತರ ಅವರು ಕಂಡು ಹಿಡಿದಿದ್ದೇನೆಂದರೆ ಪಿರಮಿಡ್‌ನ ಎತ್ತರ ಇಂಚುಗಳಲ್ಲಿ **(+5807.05")** ಇದನ್ನು $10^9$ ರಿಂದ ಗುಣಾಕಾರ ಮಾಡಿದಾಗ ಭೂಮಿ ಮತ್ತು ಸೂರ್ಯನ ನಡುವೆ ಇರುವ ಅಂತರವು ಮೈಲಿಯಲ್ಲಿ ಸಿಗುತ್ತದೆ!

**ಎತ್ತರ X $10^9$**

**= 91,651,673 ಮೈಲಿಗಳು**

**ಇಂತಹ ದಿಗಿಲುಗೊಳ್ಳುವ ಲೆಕ್ಕಾಚಾರಗಳು ಗಣಿತಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಖಗೋಳಶಾಸ್ತ್ರ ವಿಜ್ಞಾನಿಗಳಿಗೆ ದೊಡ್ಡ ಆಶ್ಚರ್ಯದ ವಿಷಯಗಳಾಗಿವೆ.**



ಈ ಆಧುನಿಕ ರಹಸ್ಯವು (ಪಿರಮಿಡ್) ನಮ್ಮ ಭೂಮಿ ಮತ್ತು ವಿಶ್ವದ ಸತ್ಯಾಂಶ ಮತ್ತು ಅಂಕಿ ಅಂಶಗಳನ್ನು ಪ್ರದರ್ಶಿಸುವುದನ್ನು ನೋಡುವಾಗ ದೈವಪ್ರೇರಿತವಲ್ಲದ ಸಾಧಾರಣ ಮನುಷ್ಯನು ಈ ದೊಡ್ಡ ಸ್ಮಾರಕವನ್ನು ಯೋಜಿಸಿ ಕಟ್ಟಿದ್ದಾನೆಂದರೆ ನಿಜವಾಗಿಯೂ ಗಂಭೀರವಾದ ಸಂದೇಹ ಉಂಟಾಗುತ್ತದೆ!!

## ಆದ್ದರಿಂದ ಈ "ಆಧುನಿಕ ರಹಸ್ಯ"ದ ಉತ್ತರವೇನು?

ಈಗ ನಾವು ದೇವರ ವಾಕ್ಯದಲ್ಲಿ ಇದರ ಉತ್ತರವನ್ನು ಹುಡುಕೋಣ –

**ಕೀರ್ತನೆ 118:22**

**"ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು"**

ಮತ್ತೆ ನಾವು ಹೀಗೆ ಓದುತ್ತೇವೆ –

**ಯೆಶಾಯ 28:16**

**"ಇಗೋ, ಪರೀಕ್ಷಿತವಾಗಿಯೂ ಮಾನ್ಯವಾಗಿಯೂ ಇರುವ ಮೂಲೆಗಲ್ಲನ್ನು ಚೀಯೋನಿನಲ್ಲಿ ಸ್ಥಿರವಾದ ಅಸ್ತಿವಾರವನ್ನಾಗಿ ಇಡುತ್ತೇನೆ."**

ಹೌದು! ಇಲ್ಲಿನ ಎರಡು ವಾಕ್ಯಗಳಲ್ಲಿ ಒಂದು ಕಲ್ಲನ್ನು ಕುರಿತು ಹೇಳಲಾಗಿದೆ. – ಅದು ... **ಮೂಲೆಗಲ್ಲು** ... ಮುಖ್ಯವಾದ (**ತಲೆ**)**ಕಲ್ಲು** ಎಂದು ಹೇಳಲಾಗಿದೆ ಮತ್ತು "**ಅಸ್ತಿವಾರದ ಕಲ್ಲು**" ಎಂದು ಸಹ ಹೇಳಲಾಗಿದೆ!!

### ಈಗ, ಇದು ಏನನ್ನು ಸೂಚಿಸುತ್ತದೆ?

ಸಾಮಾನ್ಯ ಕಟ್ಟಡಗಳಲ್ಲಿ "ಅಸ್ತಿವಾರದ ಕಲ್ಲು" ಎಂದಿಗೂ "ಮುಖ್ಯವಾದ(ತಲೆ)ಕಲ್ಲು" ಅಥವಾ ಮೂಲೆಗಲ್ಲು ಎಂದು ಕರೆಯಲು ಸಾಧ್ಯವಿಲ್ಲ – ಏಕೆಂದರೆ "ಮುಖ್ಯವಾದ (ತಲೆ)ಕಲ್ಲು" ಕಟ್ಟಡದ **ಮೇಲಿನ** ಸ್ಥಾನದಲ್ಲಿರುತ್ತದೆ – ಕಟ್ಟಡದ ಕೆಳಗಡೆ ಇರುವುದಿಲ್ಲ!

ಮತ್ತು **ಮೇಲಿನ** "ಮುಖ್ಯವಾದ(ತಲೆ) ಕಲ್ಲನ್ನು" ಎಂದಿಗೂ ಕೆಳಗಡೆ ಇಡುವಂತಹ "ಅಸ್ತಿವಾರದ ಕಲ್ಲು" ಎಂದು ಕರೆಯಲಾಗುವುದಿಲ್ಲ!

ಹಾಗಾದರೆ, ಯಾವ ರೀತಿಯ ಕಟ್ಟಡದಲ್ಲಿ **ಈ ಒಂದೇ ಕಲ್ಲು ಅಸ್ತಿವಾರದ** ಕಲ್ಲು ಮಾತ್ರವಲ್ಲದೆ, ಮುಖ್ಯವಾದ (**ತಲೆ**) ಕಲ್ಲು ಹಾಗೂ **ಮೂಲೆಗಲ್ಲು** ಸಹ ಆಗಿರಲು ಸಾಧ್ಯ?

ಈ ರೀತಿ ಈ ದಿನಗಳ ಯಾವ ಆಧುನಿಕ ಕಟ್ಟಡಗಳಲ್ಲೂ ಇರಲು ಸಾಧ್ಯವಿಲ್ಲ
ಆದರೆ ಒಂದೇ ಒಂದು ವಿಧವಾದ ಕಟ್ಟಡದಲ್ಲಿರಲು ಮಾತ್ರ ಸಾಧ್ಯ.

ಹೌದು! ಇಲ್ಲಿ ಸೂಚಿಸಿರುವ ಕಟ್ಟಡ ಪಿರಮಿಡ್‌ನ ಕಟ್ಟಡವಾಗಿರಲು ಮಾತ್ರ
ಸಾಧ್ಯ ಇದರಲ್ಲಿ –

**1. ಮೇಲಿನ (ಮೊದಲ) ಕಲ್ಲೇ "ಮೂಲೆಗಲ್ಲು" ಮತ್ತು "ಮುಖ್ಯವಾದ (ತಲೆ) ಕಲ್ಲು" ಸಹ ಆಗಿದೆ.**

**2. ಮೇಲಿನ (ಮೊದಲ) ಕಲ್ಲೇ "ಅಸ್ತಿವಾರದ ಕಲ್ಲಾಗಿ" ಇಡೀ ಕಟ್ಟಡ ಮೇಲಿನಿಂದ ಕೆಳಗಡೆಗೆ ಆಕೃತಿ ಹೊಂದುತ್ತದೆ!!**

ಆದ್ದರಿಂದ ನಾವು ನೋಡುವುದೇನೆಂದರೆ **ಈ ಪಿರಮಿಡ್‌ನ ಅಕೃತಿ ಮತ್ತು ರಚನೆಯು** ಸತ್ಯವೇದದಲ್ಲಿ
ಆಳವಾದ ಆತ್ಮೀಕ ವಿಷಯಗಳನ್ನು ಸೂಚಿಸುತ್ತದೆ.

ಆದರೆ ಈಗ ನಾವು **ನೇರವಾಗಿ ಮಹಾ ಪಿರಮಿಡ್ಡನ್ನು** ಕುರಿತು ಸತ್ಯವೇದದಲ್ಲಿ
ಸೂಚಿಸಿರುವುದನ್ನು ಓದೋಣ –

## ಯೆಶಾಯ 19:19

**"ಆ ದಿನದಲ್ಲಿ ಐಗುಪ್ತ ದೇಶದ ಮಧ್ಯೆ ಯೆಹೋವನಿಗೆ ಒಂದು ಯಜ್ಞ ಪೀಠವೂ ದೇಶದ ಎಲ್ಲೆಯಲ್ಲಿ ಯೆಹೋವನಿಗೆ ಒಂದು ಸ್ಥಂಭವೂ ಇರುವವು"**

ಈ ವಾಕ್ಯವು ಲೋಕದ ಏಳು **"ಅದ್ಭುತಗಳಲ್ಲಿ"** ಒಂದಾದ **ಪಿರಮಿಡ್ಡನ್ನು**
ಸೂಚಿಸುವುದಾದರೆ, ದೇವರು ಐಗುಪ್ತದಲ್ಲಿ ಅದ್ಭುತ (ಕಟ್ಟಡ)ಗಳನ್ನು ಕಟ್ಟುವುದನ್ನು
ಕುರಿತು ಸತ್ಯವೇದ ಹೇಳುತ್ತದೆಯೇ?

ಕೆಳಗಿನ ವಾಕ್ಯವನ್ನು ಓದೋಣ –

## ಯೆರೇಮೀಯ 32:20

**"ನೀನು ಐಗುಪ್ತ ದೇಶದಲ್ಲಿ ಮಹತ್ಕಾರ್ಯಗಳನ್ನೂ ಉತ್ಪಾತಗಳನ್ನೂ ನಡಿಸಿ ಈ ದಿನದ ವರೆಗೆ ಇಸ್ರಾಯೇಲ್ಯರಲ್ಲಿಯೂ ಇತರ ಜನರಲ್ಲಿಯೂ ಅವುಗಳನ್ನು ಮಾಡುತ್ತಾ ಬಂದು ಹೆಸರನ್ನು ಪಡೆದುಕೊಂಡಿ"**

ಹೌದು! ಈ **ಎರಡು** ವಾಕ್ಯಗಳು ನೇರವಾಗಿ – ಐಗುಪ್ತದಲ್ಲಿನ ಅದ್ಭುತ–
ಗಿಜಾ ಮಹಾ ಪಿರಮಿಡ್ಡನ್ನು ಸೂಚಿಸುತ್ತವೆ. –

ಈಗ ಪಿರಮಿಡ್ ಇರುವ ಭೂಗೋಳ ಸ್ಥಳವನ್ನು ನೋಡಿ
ಗುರುತಿಸೋಣ –

**“ಐಗುಪ್ತ ದೇಶದ ಮಧ್ಯೆ”**

ಐಗುಪ್ತದಲ್ಲಿರುವ ಗಿಜಾ ತಪ್ಪಲು ಐಗುಪ್ತದ ಮೇಲಿನ ಭಾಗ ಮತ್ತು ಕೆಳಗಿನ ಭಾಗವನ್ನು ಬೇರ್ಪಡಿಸುವಂತೆ ಸರಿಯಾಗಿ ಐಗುಪ್ತದ **ಮಧ್ಯದಲ್ಲಿದೆ.**




ಮಹಾಪಿರಮಿಡ್ ಈ ತಪ್ಪಲಿನಲ್ಲಿದೆ ಮತ್ತು ಇದರಿಂದಾಗಿಯೇ ಇದಕ್ಕೆ **ಗೀಜಾ** ಅಥವಾ **ಗೀಜೆ ಎಂಬ** ಹೆಸರು ಬಂದಿದೆ.

**“ದೇಶದ ಎಲ್ಲೆಯಲ್ಲಿ”**

ಬೌಗೋಳಿಕವಾಗಿ ಒಂದು ಸ್ಥಳವು ಮಧ್ಯದಲ್ಲಿಯೂ ಮತ್ತು ಎಲ್ಲೆಯಲ್ಲಿಯೂ ಇರುವುದೆಂಬುದು ಬೇರೆ ದೇಶಗಳಿಗೆ ಅನ್ವಯಿಸಿ ನೋಡುವಾಗ ಪರಸ್ಪರ ವಿರೋಧವಾಗಿ ಕಾಣುತ್ತದೆ. ಆದರೆ ಐಗುಪ್ತದ ವಿಷಯದಲ್ಲಿ ಹಾಗಲ್ಲ!

ಇಲ್ಲಿ **ಎಲ್ಲೆ** ಎಂಬುದು ಐಗುಪ್ತದ ಎರಡು ಭಾಗಗಳನ್ನು ಬೇರ್ಪಡಿಸುವಂತಹ ಗಡಿಯನ್ನು ಸೂಚಿಸುತ್ತದೆ ಐಗುಪ್ತದ ಮೇಲ್ಭಾಗ ಮತ್ತು ಐಗುಪ್ತದ ಕೆಳಭಾಗ.

ಅರೇಬಿಕ್ ಭಾಷೆಯಲ್ಲಿ "ಗೀಜ಼ಾ" ಎಂಬ ಪದಕ್ಕೆ "ಎಲ್ಲೆ" ಎಂದರ್ಥ ಮತ್ತು ಈ ಮಹಾ ಪಿರಮಿಡ್ ಐಗುಪ್ತದಲ್ಲಿ ಸರಿಯಾಗಿ ಈ ಎಲ್ಲೆಯ ಮಧ್ಯದಲ್ಲಿದೆ.

**ಓಹ್! ಎಂತಹ ಅದ್ಭುತ!!**

ಈಗ ವಾಕ್ಯವು ಮಹಾ ಪಿರಮಿಡ್‌ನ ಸರಿಯಾದ ಸ್ಥಳವನ್ನು ಗುರುತಿಸುತ್ತದೆ!

**ಆದ್ದರಿಂದ ಗೀಜಾದ ಮಹಾ ಪಿರಮಿಡ್ ಇರುವ ಸ್ಪಷ್ಟವಾದ ಭೌಗೋಳಿಕ ಸ್ಥಳವನ್ನು ಈ ವಾಕ್ಯಗಳು ತೋರಿಸುತ್ತದೆ!**

ಈಗ ಈ ವಾಕ್ಯದಲ್ಲಿರುವ ಬೇರೆ ಭಾಗವನ್ನು ಕುರಿತು ಓದೋಣ –

**ಯೆಶಾಯ 19:20**

**"ಅವು ಐಗುಪ್ತ ದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವವು"**

**ಈ ಗುರುತಾಗಿಯೂ ಸಾಕ್ಷಿಯಾಗಿಯೂ ಎಂಬುದಕ್ಕೆ ಅರ್ಥವೇನು?**

ಈಗ ನಾವು ಇವುಗಳನ್ನು ಒಂದೊಂದಾಗಿ ಅಭ್ಯಾಸ ಮಾಡೋಣ –

"ಗುರುತಾಗಿಯೂ" ಇದನ್ನು ಇಬ್ರಿಯ ಪದವಾದ "ಔತ್"ನಿಂದ ಭಾಷಾಂತರಿಸಲ್ಪಟ್ಟಿದೆ. ಇದಕ್ಕೆ "ಸಂಕೇತ" ಅಥವಾ "ಸಾಕ್ಷಿ" ಎಂದೂ ಸಹ ಅರ್ಥವಿದೆ. (ಸ್ಟ್ರಾಂಗ್ಸ್ – ಇಬ್ರಿಯ #226)

**ಈಗ ಈ ಮಹಾ ಪಿರಮಿಡ್ 'ಸೇನಾಧೀಶ್ವರನಾದ ಯೆಹೋವನಿಗೆ" ಯಾವ ವಿಧದಲ್ಲಿ ಗುರುತಾಗಿರುವುದು?**

ಅದರ ನಿರ್ಮಾಣದಲ್ಲಿನ ವಿಸ್ಮಯಕಾರಿ ಪ್ರೇರಿಸುವಂಥಹ ವೈಭವ, ಮತ್ತು ಅದರ ಜ್ಞಾನ ಭಂಡಾರವು ಅದೃಶ್ಯನಾದ ಮತ್ತು ವಿಶ್ವದ ಮಹಾ ಸೃಷ್ಟಿಕರ್ತನಾದ ದೇವರು ಇದ್ದಾರೆಂದು ಸಾಕ್ಷಿ ನೀಡುತ್ತದೆ. ಆದರೆ ಲೋಕವೆಲ್ಲವೂ

**"ದೇವರು ಎಂಬುದೇ ಮನುಷ್ಯನ ಸೃಷ್ಟಿ"**

ಎಂಬ ಮನೋಭಾವದಲ್ಲಿದೆ.

ಹೌದು! ಮಹಾ ಪಿರಮಿಡ್ **"ಸೇನಾಧೀಶ್ವರನಾದ ಯೆಹೋವನಿಗೆ ಅದ್ಭುತವಾದ ಗುರುತಾಗಿರುವುದು"**

**"ಸಾಕ್ಷಿಯಾಗಿಯೂ"** ಈ ಪದವು ಇಬ್ರಿಯ ಪದವಾದ **"ed"** ಎಡ್‌ನಿಂದ ಭಾಷಾಂತರಿಸಲ್ಪಟ್ಟಿದೆ.

ಇದಕ್ಕೆ "ದಾಖಲೆ ಮಾಡುವುದು" ಅಥವಾ "ಸಾಕ್ಷಿ ಕೊಡುವುದು" ಎಂದರ್ಥ (ಇಬ್ರಿಯ ಸ್ಟ್ರಾಂಗ್ # 5707)

**ಮಹಾ ಪಿರಮಿಡ್ ಯಾವ ರೀತಿಯಲ್ಲಿ "ಸೇನಾಧೀಶ್ವರನಾದ ಯೆಹೋವನ" ಬಗ್ಗೆ ಸಾಕ್ಷಿ ನೀಡುತ್ತದೆ?**

ದೇವರು ಸತ್ಯವೇದದಲ್ಲಿ ವಿವರಿಸಿರುವಂತೆ ಮನುಷ್ಯಕುಲದ **ರಕ್ಷಣೆಗಾಗಿ ದೇವರ ಯೋಜನೆಯನ್ನು** ಕುರಿತು ಈ ಮಹಾ ಪಿರಮಿಡ್ ದಾಖಲೆ ಅಥವಾ "ಸಾಕ್ಷಿ"ಯನ್ನು ಹೊಂದಿದೆ.

**ಇದು ಆಶ್ಚರ್ಯಕರವಾಗಿದೆ ಅಲ್ಲವೆ? ಇದು ಹೇಗೆ?**

ವಿಧ ವಿಧವಾಗಿರುವ ಎಲ್ಲಾ **(ಸಣ್ಣ)ದಾರಿಗಳು** ಮತ್ತು ಕೋಣೆಗಳು ಮತ್ತು ಅದರ ವಿವರಣೆ ಮತ್ತು ಅಳತೆಗಳು ಆದಿಕಾಂಡದಿಂದ ಪ್ರಕಟನೆಯಲ್ಲಿ ಕಾಣುವ ಹಾಗೆಯೇ ದೇವರ ದೈವೀಕ ಯೋಜನೆಯ ಪರಿಪೂರ್ಣ ದಾಖಲೆಯನ್ನು ಹೊಂದಿದೆ.

ಹೌದು! **ಕಲ್ಲಿನಲ್ಲಿ** ದೇವರು ತನ್ನ ದೈವೀಕ ಯೋಜನೆಯನ್ನು **ಎರಡನೆಯ ಸಾಕ್ಷಿಯಾಗಿ** ಮನುಷ್ಯನಿಗೆ ಒದಗಿಸಿದ್ದಾನೆ!

ಬಹುಶಃ ಯೇಸು ಈ ಕೆಳಗಿನ ವಾಕ್ಯವನ್ನು ಹೇಳುವಾಗ ಆತನ ಮನಸ್ಸಿನಲ್ಲಿ ಈ ಮಹಾ ಪಿರಮಿಡ್ ಇದ್ದಿರಬಹುದು –


**ಲೂಕ 19:40**

**"ಆತನು (ಯೇಸು) - ಇವರು ಸುಮ್ಮನಾದರೆ ಈ ಕಲ್ಲುಗಳೇ ಕೂಗುವವು ಎಂದು ನಿಮಗೆ ಹೇಳುತ್ತೇನೆ ಅಂದನು."**

ಹೌದು! ಕೆಳಗೆ ಕೊಟ್ಟಿರುವ ನಿದರ್ಶನದಲ್ಲಿ ಪಿರಮಿಡ್‌ನಲ್ಲಿರುವ (ಸಣ್ಣ)ದಾರಿಗಳು ಮತ್ತು ಕೋಣೆಗಳ ಚಿತ್ರಗಳಿವೆ, ಇದನ್ನು ನಾವು ಹೀಗೆ ಕರೆಯಬಹುದು...

**ಕಲ್ಲಿನಲ್ಲಿರುವ ಸತ್ಯವೇದ!**

ಹೌದು! ಸತ್ಯವೇದದಲ್ಲಿ ಆದಿಕಾಂಡದಿಂದ ಪ್ರಕಟನೆಯವರೆಗೆ ದಾಖಲಾಗಿರುವಂತೆಯೇ ಇವೆಲ್ಲಾ ಕಲ್ಲುಗಳು **ಮನುಷ್ಯನಿಗಾಗಿರುವ ದೇವರ ದೈವೀಕ ಯೋಜನೆಯನ್ನು** ಕುರಿತು "ಕೂಗುವದು" **ಹೌದು! ನಂಬಿದರೆ ನಂಬಿ, ಬಿಟ್ಟರೆ ಬಿಡಿ.**




# ಪಿರಮಿಡ್‌ನ ಒಳಮಾರ್ಗಗಳು

ಈ ವಿವಿಧ ಮಾರ್ಗಗಳು ಮತ್ತು ಅದರ ವೈಶಿಷ್ಟ್ಯಗಳನ್ನು ಕುರಿತು **ವಿವರವಾಗಿ** ಅರ್ಥಮಾಡಿಕೊಳ್ಳುವುದಕ್ಕೆ ಮೊದಲು **ಯೆಶಾಯ 19:19**ರಲ್ಲಿರುವ ಮಹಾ ಪಿರಮಿಡ್‌ನ **ಇನ್ನೆರಡು** ಪದಗಳನ್ನು ಕುರಿತು ಓದೋಣ –

"ಆ ದಿನದಲ್ಲಿ ಐಗುಪ್ತ ದೇಶದ ಮಧ್ಯೆ ಯೆಹೋವನಿಗೆ ಒಂದು ಯಜ್ಞಪೀಠವೂ ದೇಶದ ಎಲ್ಲೆಯಲ್ಲಿ ಯೆಹೋವನಿಗೆ ಒಂದು ಸ್ಥಂಭವೂ ಇರುವವು"

**ಇದು ಏನನ್ನು ಸೂಚಿಸುತ್ತದೆ?**

ಯಾವ ರೀತಿಯಲ್ಲಿ ಈ ಪಿರಮಿಡ್ ಯೆಹೋವನಿಗೆ **"ಯಜ್ಞಪೀಠ"**ವಾಗಿಯೂ ಮತ್ತು ಸ್ತಂಭವಾಗಿಯೂ ಇರುವವು? ಮುಂದೆ ಓದಿ ನೋಡೋಣ –

**"ಸ್ತಂಭ"** – ಯಾವ ರೀತಿಯಲ್ಲಿ ಪಿರಮಿಡ್‌ಅನ್ನು ಸ್ತಂಭ ಎಂದು ಕರೆಯಬಹುದು?

ನಿಶ್ಚಯವಾಗಿಯೂ ಇದು **ಸ್ತಂಭವಲ್ಲ** ಆದರೆ ಒಂದು ದೊಡ್ಡ ಸ್ಮಾರಕ!

ಆದರೆ ಇದರ ಇಬ್ರಿಯ ಪದ ಮತ್ತು ಅರ್ಥವನ್ನು ಅಭ್ಯಾಸ ಮಾಡುವಾಗ ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಇಲ್ಲಿ ಕೊಟ್ಟಿರುವ ಇಬ್ರಿಯ ಪದವು **"ಮತ್ಸೇಬಾಹ್"** (**ಸ್ಟ್ರಾಂಗ್ಸ್ ಇಬ್ರಿಯ** #4676) ಅಂದರೆ **"ಒಂದು ದುಂಡಾದ ಕಂಬ"** ಅಥವಾ **"ಸ್ಮಾರಕ ಕಲ್ಲು"**.

ನಾವು ಯುದ್ಧ ವೀರರು ಮತ್ತು ಹುತಾತ್ಮರ ಸ್ಮಾರಕ (ನೆನಪಿನ) ಕಲ್ಲನ್ನು ನೋಡುತ್ತೇವೆ. ಇದರಿಂದ ಆ ಜನರು ಮತ್ತು ಅವರ ಸಾಹಸ ಕಾರ್ಯ ನಮ್ಮ ನೆನಪಿಗೆ ಬರುತ್ತದೆ. ಇದೇ ರೀತಿ ಈ ಮಹಾ ಪಿರಮಿಡ್ ಮಹತ್ತಾದ ಮತ್ತು ಕಣ್ಣಿಗೆ ಕಾಣದಿರುವ ಜೀವವುಳ್ಳ ದೇವರಿಗೆ ಒಂದು "ಸ್ಮಾರಕ ಕಲ್ಲಾಗಿದೆ" ಇಂತಹ ದೇವರನ್ನು ಕುರಿತು ಹೀಗೆ ಓದುತ್ತೇವೆ.

## 1 ತಿಮೋಥೆ 6:16

**"ತಾನೊಬ್ಬನೇ ಅಮರತ್ವವುಳ್ಳವನೂ ಅಗಮ್ಯವಾದ ಬೆಳಕಿನಲ್ಲಿ ವಾಸ ಮಾಡುವವನೂ ಆಗಿದ್ದಾನೆ; ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು"**

ಹೌದು! ಈ ಮಹಾ ಪಿರಮಿಡ್ **ದೇವರು ಇರುವಿಕೆಯನ್ನು ಮತ್ತು ಆತನ ಮಹಿಮೆಯನ್ನು** ಮತ್ತು **ಮಹತ್ವವನ್ನು** ಪ್ರಕಟಪಡಿಸುವಂತಹ **ಸ್ಮಾರಕ ಕಲ್ಲಾಗಿರುವುದು.**

**"ಯಜ್ಞಪೀಠ"** – ಯಜ್ಞಪೀಠವು ಬಲಿಯನ್ನು ಅರ್ಪಿಸುವ ಸ್ಥಳವಾಗಿದೆ

- **ತಾಮ್ರದ ಯಜ್ಞವೇದಿಯ** ಮೇಲೆ ಪ್ರಾಣಿಗಳ ಸರ್ವಾಂಗ ಹೋಮವಾಗಿರಬಹುದು. (**ವಿಮೋಚನಕಾಂಡ** 40:29)
- ಅಥವಾ **ಧೂಪವೇದಿಯ** ಮೇಲೆ ಪರಿಮಳ ದ್ರವ್ಯಗಳ ಯಜ್ಞವಾಗಿರಬಹುದು. (**ವಿಮೋಚನಕಾಂಡ** 40:26,27)

ಈ ಮಹಾ ಪಿರಮಿಡ್ ಇವೆರಡೂ **ಅಲ್ಲ!**

**ಹಾಗಾದರೆ ಇದು ಯಾವ ರೀತಿಯ "ಯಜ್ಞಪೀಠ"ವಾಗಿದೆ?**

ಈಗ ನಾವು ಮೂರನೆಯ ವಿಧವಾದ ಬಲಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಬರೆದಿರುವುದನ್ನು ಕುರಿತು ನೋಡೋಣ –

**ಇಬ್ರಿಯ 13:15**

**"ಆದದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡಬಿಡದೆ ಸಮರ್ಪಿಸೋಣ"**

ಹೌದು! ಇದು ಲೋಕದ ಎಲ್ಲಾ ಜನರು **"ದೇವರಿಗೆ ಸ್ತೋತ್ರ ಯಜ್ಞವನ್ನು"** ಸಮರ್ಪಿಸುವ ಸ್ಥಳವಾಗಿರುತ್ತದೆ.

ಲೋಕದ ಎಲ್ಲಾ ಜನರು ಈ ಮಹಾ ಪಿರಮಿಡ್ಡನ್ನು ನೋಡಿ ತಮ್ಮ ಹೃದಯದ ಅಂತರಾಳದಿಂದ ಸ್ತೋತ್ರವನ್ನು ಸಲ್ಲಿಸುವರು ಮತ್ತು **ದೇವರ ಮಹಿಮೆ** ಈ ಮಹಾ ಪಿರಮಿಡ್‌ನೊಳಗೆ ಇರುವುದು!

ಈಗ ನಾವು ಪಿರಮಿಡ್‌ನ ಸಣ್ಣ ದಾರಿಗಳು ಮತ್ತು ಅದರ ವಿವರಣೆಯನ್ನು ಕುರಿತು ಅಭ್ಯಾಸ ಮಾಡೋಣ –

ಈ ಮಹಾ ಪಿರಮಿಡ್‌ನಲ್ಲಿ ಯಾವ ವಿಧವಾದ ಬರವಣಿಗೆಯೂ ಇಲ್ಲ!

ಆದರೆ ಇದರ ಒಳಗಿನ ಸಣ್ಣದಾರಿಗಳು ಮತ್ತು ಕೋಣೆಗಳು ದೇವರು ಮನುಷ್ಯ ಜಾತಿಗಾಗಿ ಇಟ್ಟಿರುವ **ಮಹಾ ರಕ್ಷಣೆಯ ಯೋಜನೆಯನ್ನು** ಕುರಿತು ಹೇಳುತ್ತದೆ ಮತ್ತು ಪ್ರಕಟಿಸುತ್ತದೆ. ಈ ವಿಷಯವು ಸತ್ಯವೇದದಲ್ಲಿ ಆದಿಕಾಂಡದಿಂದ ಪ್ರಕಟನೆಯವರೆಗೆ ಪ್ರಕಟವಾಗಿದೆ ಇದು ಹೇಗೆ ಎಂದು ಓದಿ ನೋಡೋಣ.


## ದ್ವಾರ (ಬಾಗಿಲು)

ಮಹಾಪಿರಮಿಡ್‌ನ ಮುಖ್ಯದ್ವಾರ ಅಥವಾ ಬಾಗಿಲು ಭೂಮಿಯ ನೆಲಮಟ್ಟಕ್ಕಿಂತ ಸುಮಾರು **50** ಅಡಿ ಎತ್ತರದಲ್ಲಿದೆ.

ಬಹಳ ಕಾಲದ ವರೆಗೂ ಈ ದ್ವಾರವನ್ನು ಸಲುಭವಾಗಿ ಕಂಡು ಹಿಡಿಯಲಾಗಿರಲ್ಲಿಲ್ಲ ಆದ್ದರಿಂದ ನಿಧಿಯ ಹುಡುಕಾಟಕ್ಕಾಗಿ
ಕಳ್ಳರು ಬೇರೆ ದ್ವಾರಗಳನ್ನು ಬಲವಂತವಾಗಿ ತೆರೆದರು!!

ಆದರೆ ಒಬ್ಬ ವ್ಯಕ್ತಿ ಪಿರಮಿಡ್‌ನ **ದ್ವಾರದೊಳಗೆ** ಪ್ರವೇಶಿಸುತ್ತಿದ್ದಂತೆಯೇ ಆಶ್ಚರ್ಯಕರವಾದ ವಿಷಯ ಉಂಟಾಗುತ್ತದೆ!

ಈ ದ್ವಾರವು ನಿಮ್ಮನ್ನು ಕೆಳಗೆ ಮತ್ತು ಇನ್ನೂ ಕೆಳಗೆ ಮತ್ತು ಭೂಮಿಯ ನೆಲಮಟ್ಟಕ್ಕಿಂತ ತೀರಾ ಕೆಳಗೆ ಒಂದು ಹಳ್ಳಕ್ಕೆ(ಕುಳಿಗೆ) ಕೊಂಡೊಯ್ಯುತ್ತದೆ!




**ಹೌದು! ಇದನ್ನು ಇಳಿಜಾರಿನ ದಾರಿ [Descending Passage] ಎಂದು ಹೇಳಲಾಗುತ್ತದೆ.**

**ಇದು ಏನನ್ನು ಸೂಚಿಸುತ್ತದೆ?**

ಇದು ಏದೇನ್ ತೋಟದಲ್ಲಿ ಮನುಷ್ಯನು ಪರಿಪೂರ್ಣತೆಯಲ್ಲಿ ಸೃಷ್ಟಿಸಲ್ಪಟ್ಟ **ಕೆಲವೇ ಸಮಯದಲ್ಲಿ** ಬಹು ಬೇಗನೆ **ಪಾಪದಲ್ಲಿ ಕೆಳಗೆ ಇಳಿಯುವಂತಾಯಿತು** ಮತ್ತು ಆ ದಾರಿಯು ಮರಣಕ್ಕೆ ಕೊಂಡೊಯ್ಯುತ್ತದೆ ಎಂಬುದನ್ನು ಈ "**ಹಳ್ಳ**"(ಕುಳಿ) ಸೂಚಿಸುತ್ತದೆ.

ಇದನ್ನೇ ಕೆಳಗಿನ ವಾಕ್ಯದಲ್ಲಿ ವ್ಯಕ್ತಪಡಿಸಿರುವುದನ್ನು ನೋಡುತ್ತೇವೆ –

**ರೋಮಾ 5:12**

**"ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು"**

ಹೌದು! ಇದು ಮನುಷ್ಯನು **ಇಳಿಜಾರಿನಲ್ಲಿ** ಬೀಳುವ ಚಿತ್ರವಾಗಿದೆ.

ಮತ್ತು ಇದು **"ಒಬ್ಬ ಮನುಷ್ಯನಾದ ಆದಾಮನಿಂದ"** ಆರಂಭವಾಯಿತು.

ಭೂಮಿಯ ನೆಲಮಟ್ಟಕ್ಕಿಂತ **50** ಅಡಿ ಎತ್ತರ ಎಂಬುದು ದೇವರು ಮನುಷ್ಯನನ್ನು

ಎಂತಹಾ **ಮಹಿಮೆಯಲ್ಲಿ** ಸೃಷ್ಟಿಸಿದನೆಂದು ಸೂಚಿಸುತ್ತದೆ.

**ಆದಿಕಾಂಡ 1:26**

**“ಆಮೇಲೆ ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ...”**


ಹೌದು! ಮನುಷ್ಯನು ಏದೇನ್ ತೋಟದಲ್ಲಿ ಸೃಷ್ಟಿಸಲ್ಪಟ್ಟಾಗ ಅವನು ಭೂಮಿಯ ಬೇರೆ ಎಲ್ಲಾ ಸೃಷ್ಟಿಗಳಿಗಿಂತ **ಅತಿ ಉನ್ನತ** ಸ್ಥಾನದಲ್ಲಿ ಸೃಷ್ಟಿಸಲ್ಪಟ್ಟನು.

ಭೂಮಿಯ ನೆಲಮಟ್ಟ ಅಥವಾ ಸಮತಲವು ಬೇರೆ ಎಲ್ಲಾ ಸೃಷ್ಟಿಗಳಾದ ಮೃಗಗಳು ಪಕ್ಷಿಗಳು, ಮೀನುಗಳು ಇತರೆಗಳನ್ನು ಸೂಚಿಸುತ್ತದೆ. ಮನುಷ್ಯನ ಸೃಷ್ಟಿಯಲ್ಲಿ ಬಹಳ ವ್ಯತ್ಯಾಸವಿತ್ತು ಮತ್ತು ನಿಜವಾಗಿಯೂ ಆತನು ಶರೀರದಲ್ಲಿ ಸೃಷ್ಟಿಸಲ್ಪಟ್ಟನು ಮತ್ತು ಬೇರೆ ಎಲ್ಲಾ ಶರೀರಕ್ಕಿಂತಲೂ ಅತಿ ಉನ್ನತ ಮಟ್ಟದಲ್ಲಿ ಸೃಷ್ಟಿಸಲ್ಪಟ್ಟನು.

ಆದರೆ **ಬಹು ಬೇಗನೆ** ಅತನು ಪಾಪದಲ್ಲಿ ಬಿದ್ದನು!

ಮತ್ತು ನಾವು ಹೀಗೆ ನೋಡುತ್ತೇವೆ –

## ಇಳಿಜಾರಿನ ದಾರಿ



ಇದು ಮನುಷ್ಯನ **ಬೀಳುವಿಕೆಯನ್ನು** ಸೂಚಿಸುತ್ತದೆ ಮತ್ತು **ಕ್ರಮೇಣ ಇಳಿಜಾರಿನಂತಿರುವುದು** ಅಧಿಕವಾದ ಪಾಪ ಮತ್ತು ದುಷ್ಟತ್ವವನ್ನು ಸೂಚಿಸುತ್ತದೆ.

ಈ **"ದಾರಿ"**ಯನ್ನು ಮೊದಲು ಆದಾಮನು ತೆರೆದನು, ನಂತರ ಎಲ್ಲಾ ಮನುಷ್ಯ ಜಾತಿಯು ಈ ದಾರಿಯಲ್ಲಿ ಸೇರಿದರು (ನಡೆದರು) ಈ ದಾರಿಯನ್ನು ಸತ್ಯವೇದದ **ಮತ್ತಾಯ** 7:13 ರಲ್ಲಿ ಅಗಲವಾದ ದಾರಿ ಎಂದು ಸೂಚಿಸಲಾಗಿದೆ.

**ಈ ಇಳಿಜಾರಿನ ದಾರಿಯ ಕೊನೆಯಲ್ಲಿ ಕುಳಿ (The Pit)** ಎಂಬ ಸ್ಥಳಕ್ಕೆ ಬರುತ್ತೇವೆ.

## ಕುಳಿ

ಇದು **ಇಳಿಜಾರಿನ ದಾರಿಯ ಮುಕ್ತಾಯದ ಸ್ಥಳವಾಗಿದೆ** ಮತ್ತು ಅಗಲವಾದ ದಾರಿಯ ಮುಕ್ತಾಯಕ್ಕೆ ಸರಿಯಾದ ಸೂಚನೆಯಾಗಿದೆ.

**"ನಾಶಕ್ಕೆ ಹೋಗುವ ಬಾಗಿಲು ದೊಡ್ಡದು" - ಮತ್ತಾಯ** 7:13

ಹೌದು! ಇಲ್ಲಿ ನಾಶ ಎಂಬುದು ಪಾಪದ ದಾರಿಗಳ **ಅಂತ್ಯವಾದ ಮರಣವನ್ನು** ಸೂಚಿಸುತ್ತದೆ (**ರೋಮಾ** 6:23)

**"ಪಾಪವು ಕೊಡುವ ಸಂಬಳ ಮರಣ"**

ಕೆಳಗಿನ ವಾಕ್ಯದಲ್ಲಿಯೂ ಸಹ ಇದನ್ನೇ ಕುರಿತು ಓದುತ್ತೇವೆ –

**ಕೀರ್ತನೆ 55:23**

**"ದೇವರೇ, ನೀನು ದುಷ್ಟರನ್ನು ಪಾತಾಳದ ಕೆಳಕ್ಕೆ ದೊಬ್ಬಿ ಬಿಡುವಿ"**

ಮತ್ತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಯೆಶಾಯ 38:18**


**"ಪಾತಾಳದವರು ನಿನ್ನನ್ನು ಸ್ತುತಿಸರು, ಸತ್ತವರು ನಿನ್ನನ್ನು ಕೀರ್ತಿಸರು, ಅಧೋಲೋಕಕ್ಕೆ ಇಳಿದು ಹೋದವರು ನಿನ್ನ ಸತ್ಯಸಂಧತೆಯನ್ನು ಆಶ್ರಯಿಸಲಾರರು"**

ಹೌದು! ಮರಣವು "ಪಾತಾಳ" ಅಥವಾ "ಅಧೋಲೋಕ" ಮತ್ತು ಸತ್ಯವೇದದ

"ನರಕವಾಗಿದೆ" ಅಂದರೆ ಮರಣದ ಸ್ಥಿತಿಯಾಗಿದೆ.

ಈಗ, ಒಬ್ಬ ವ್ಯಕ್ತಿಯು ಈ ಇಳಿಜಾರಿನ ದಾರಿಯಲ್ಲಿ ಸ್ವಲ್ಪ ದೂರ ಪ್ರಯಾಣಿಸಿದ ನಂತರ **ಮೊದಲು ತಲುಪುವ ಸ್ಥಳವೇ ಮೇಲೇರುವ ಮಾರ್ಗ (Ascending Passage).**

# ಮೇಲೇರುವ ದಾರಿ ಮತ್ತು ಗ್ರಾನೈಟ್ ಪ್ಲಗ್




ಈ ದಾರಿಯು "ಇಳಿಜಾರಿನ ಮಾರ್ಗ"ದಿಂದ ತಪ್ಪಿಸಿಕೊಳ್ಳುವ ದಾರಿಯಂತೆ ತೋರುತ್ತದೆ.

**ಇದು ಏನನ್ನು ಸೂಚಿಸುತ್ತದೆ?**


ಇದು ಮನುಷ್ಯ ಜಾತಿಯು ಮರಣ ದಂಡನೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಬರುವ **ಮೊದಲ** ಅವಕಾಶವನ್ನು ಸೂಚಿಸುತ್ತದೆ.

– ಇಸ್ರಾಯೇಲ್ಯರಿಗೆ ದೇವರು ಕೊಟ್ಟಂತಹ **ಧರ್ಮಶಾಸ್ತ್ರವನ್ನು** ಅನುಸರಿಸುವವರೆಲ್ಲರಿಗೂ **ಜೀವವನ್ನುಂಟು** ಮಾಡುವ ವಾಗ್ದಾನವಾಗಿತ್ತು. ಇದನ್ನು

ಕುರಿತು ಯಾಜಕಕಾಂಡ 18:5, ಗಲಾತ್ಯ 3:12 ರಲ್ಲಿ ಓದಿರಿ –

**"ನನ್ನ ಆಜ್ಞಾವಿಧಿಗಳ ಪ್ರಕಾರ ನಡೆದುಕೊಳ್ಳುವವರು ಆ ಆಜ್ಞಾವಿಧಿಗಳ ಮೂಲಕ ಬದುಕುವರು"**

**"....ಅದರ ನೇಮಗಳನ್ನು ಆಚರಿಸಿದವನೇ ಅವುಗಳ ಮೂಲಕ ಬದುಕುವನು..."**



## ನಂತರ ನಾವು ಏನನ್ನು ನೋಡುತ್ತೇವೆ?

ಈಗ "ಕೆಂಪು ಗ್ರಾನೈಟ್ ಪ್ಲಗ್" ಮೇಲೇರುವ ದಾರಿಯನ್ನು ಸಂಪೂರ್ಣವಾಗಿ **ಅಡ್ಡಿ ಮಾಡಿತು** – ಯಾರನ್ನೂ ಒಳಗಡೆ ಬರದ ಹಾಗೆ ತಡೆ ಮಾಡಿತು. ಆದ್ದರಿಂದ ಇದು ಜೀವದ ಮಾರ್ಗದ ಹಾಗೆ ತೋರಿದರೂ ಇದು **ನಿಜವಾಗಿ ಜೀವಮಾರ್ಗವಾಗಿರಲಿಲ್ಲ** ಎಂಬುದನ್ನು ಸರಿಯಾಗಿ ಸೂಚಿಸುತ್ತದೆ.

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### ರೋಮಾ 7 : 10

**"ಜೀವಿಸುವುದಕ್ಕಾಗಿ ಕೊಟ್ಟಿರುವ ಆಜ್ಞೆಯೇ ಮರಣಕ್ಕೆ ಕಾರಣವಾಯಿತೆಂದು ನನಗೆ ಕಂಡು ಬಂತು"**


## ಈ "ಕೆಂಪು ಗ್ರಾನೈಟ್ ಪ್ಲಗ್" ಎಂದರೇನು?

ಇದು **ದೈವೀಕವಾಗಿರುವ** ಏನನ್ನೋ ಸೂಚಿಸುತ್ತದೆ ಏಕೆಂದರೆ ಈ ಕೆಂಪು ಗ್ರಾನೈಟ್ **ರಾಜನ ಕೋಣೆ (Kings Chamber)** ಮತ್ತು **ಪೂರ್ವದ ಕೋಣೆಯ (Ante Chamber) ಗ್ರಾನೈಟ್ ಲೀಫ್‌ನಲ್ಲಿಯೂ** ಸಹ ಇದೆ.

ಹೌದು! ಇದು ದೇವರ **ದೈವೀಕ** ಮತ್ತು ಪರಿಪೂರ್ಣ **ಅಜ್ಞಾವಿಧಿಗಳನ್ನು** ಸೂಚಿಸುತ್ತದೆ – **ನೀತಿಯಲ್ಲಿ ಪರಿಪೂರ್ಣತೆ!**

ಅದರೆ ದೇವರ ಪರಿಪೂರ್ಣವಾದ ಅಜ್ಞಾವಿಧಿಗಳನ್ನು ಪರಿಪೂರ್ಣವಲ್ಲದ ಇಸ್ರಾಯೇಲ್ಯರು ಎಂದಿಗೂ ಪರಿಪೂರ್ಣವಾಗಿ ಕೈಗೊಳ್ಳಲು ಸಾಧ್ಯವಿಲ್ಲ.

**ಒಂದು ಮಾರ್ಗ ಆದರೆ ಅದು ನಿಜವಾದ ಮಾರ್ಗವಲ್ಲ!!**



## ಈಗ, ಇಸ್ರಾಯೇಲ್ಯರು ಅಜ್ಞಾವಿಧಿಗಳ ಮಾರ್ಗದಲ್ಲಿ ನಡೆದರೆ?

ಹೌದು! ಈ ಮಾರ್ಗವು ಬಹಳ ಚಿಕ್ಕದಾಗಿದೆ ಮತ್ತು ಹತ್ತುವುದಕ್ಕೆ ಬಹಳ ಅನುಕೂಲಕರವಲ್ಲದಾಗಿದೆ. – ಇಸ್ರಾಯೇಲ್ಯರು ದೇವರ ಪರಿಪೂರ್ಣವಾದ ಅಜ್ಞಾವಿಧಿಗಳನ್ನು ಅನುಸರಿಸಿ ನಡೆಯುವುದಕ್ಕೆ ಪ್ರಯತ್ನಿಸಿ, ಅಹಿತಕರವಾದ ದಾಸತ್ವದ ಅನುಭವವನ್ನು ಹೊಂದಿದರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### ಗಲಾತ್ಯ 4:24,25

“ಹಾಗರ್ ಅಂದರೆ ಅರಬಸ್ಥಾನದಲ್ಲಿರುವ ಸೀನಾಯಿ ಪರ್ವತ. ಅವಳು ಈಗಿನ ಯೆರೂಸಲೇಮ್ ಎಂಬವಳಿಗೆ ಸರಿಬೀಳುತ್ತಾಳೆ; ಹೇಗೆಂದರೆ ಈಕೆ ತನ್ನ ಮಕ್ಕಳ ಸಹಿತ ದಾಸತ್ವದಲ್ಲಿದ್ದಾಳೆ”

ಹೌದು! ಇಸ್ರಾಯೇಲ್ಯರು ಧರ್ಮಶಾಸ್ತ್ರಾಧೀನರಾದ ಬಂಧನದಲ್ಲಿರುವ ಮಕ್ಕಳು!

**ಈಗ, ಇಳಿಜಾರಿನ ಮಾರ್ಗವನ್ನು ಬಿಟ್ಟು ಬೇರೆ ದಾರಿ ಇದೆಯೇ?**

ಹೌದು! ಅಲ್ಲಿ ಇನ್ನೊಂದು ಇಳಿಜಾರಿನ ಮಾರ್ಗವಿದೆ, ಇದನ್ನು ಸುರಂಗ ಬಾವಿ ಎಂದು ಕರೆಯಲಾಗುತ್ತದೆ.

ಈ ದಾರಿಯು ಮೇಲಕ್ಕೆ ಕರೆದೊಯ್ಯುತ್ತದೆ. ಇದು ತೆರೆದಿರುವ ಮಾರ್ಗವಾಗಿದೆ.

## ಸುರಂಗ ಬಾವಿ

**ಈ ಸುರಂಗ ಬಾವಿ ಇಳಿಜಾರಿನ ಮಾರ್ಗದಿಂದ ಹೊರ ಬರುವುದಕ್ಕೆ ಇರುವ ಬೇರೆ ಒಂದೇ ಒಂದು ದಾರಿಯಾಗಿದೆ.**

### ಇದು ಯಾವುದಕ್ಕೆ ಚಿತ್ರಣವಾಗಿದೆ?

ಇದು ಎಲ್ಲಾ ಮನುಕುಲಕ್ಕೆ ಪಾಪ ಮತ್ತು ಮರಣದ ಮಾರ್ಗದಿಂದ ರಕ್ಷಣೆ ಹೊಂದಲು ಇರುವ ಒಂದೇ ಒಂದು ಮಾರ್ಗದ ಚಿತ್ರಣವಾಗಿದೆ.

ಈ ಮಾರ್ಗವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

### ಅಪೋಸ್ತಲರ ಕೃತ್ಯಗಳು 4:12

“ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ

**ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ"**

ಹೌದು! ಆ ಮಾರ್ಗವೇ ಯೇಸು ಆದ್ದರಿಂದಲೇ ಯೇಸು ಹೀಗೆಂದನು –

**ಯೋಹಾನ 14 : 6**

**"ನಾನೇ ಮಾರ್ಗವೂ ..."**

ಆದ್ದರಿಂದ, ಈ "ಸುರಂಗ ಬಾವಿ" ಯು ಎಲ್ಲಾ ಮನುಷ್ಯ ಜಾತಿಗಾಗಿ ತನ್ನ ಜೀವವನ್ನು ನೀಡುವ ಒಬ್ಬನೇ ರಕ್ಷಕನಾದ ಯೇಸುವನ್ನು ಸೂಚಿಸುತ್ತದೆ. ಯಾರ್‍ಯಾರು ಆತನ ಮೇಲೆ ನಂಬಿಕೆ ಇಡುತ್ತಾರೋ ಅವರೆಲ್ಲರಿಗೂ ಅತನು ಹೇಳುವುದನ್ನು ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಯೋಹಾನ 11:25, 26**

**"ಯೇಸು ಆಕೆಗೆ - ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನೂ ಎಂದಿಗೂ ಸಾಯುವುದಿಲ್ಲ"**

ಈಗ, ಈ ಸುರಂಗ ಬಾವಿಯು ಮೇಲೆ ಹೋದಂತೆ ನೆಲಸಮದ ಸ್ಥಳದಲ್ಲಿ ತೆರೆದುಕೊಳ್ಳುತ್ತದೆ. ಇದನ್ನು "**ಗ್ರೋಟೊ**" ಎನ್ನಲಾಗುವುದು.
ಏನಿದು ಮತ್ತು ಇದು ಏನನ್ನು ಸೂಚಿಸುತ್ತದೆ?

ಬನ್ನಿ ಮುಂದೆ ನೋಡೋಣ –




ಇದು ನೆಲಸಮದ ಸ್ಥಳದಲ್ಲಿರುವ ಸುರಂಗ ಬಾವಿ ಇದು ನೋಡಲು "**ಸ್ಫೋಟಗೊಂಡಿರುವಂತೆ**" ಅಥವಾ ನೆಲವು "**ತೆರೆದಿರುವಂತೆ**" ಕಾಣುತ್ತದೆ.

**ಇದು ಏನನ್ನು ಸೂಚಿಸುತ್ತದೆ?**

ಇದು ಕಲ್ವಾರಿ ಶಿಲುಬೆಯಲ್ಲಿ ಎಲ್ಲರಿಗಾಗಿ ಈಡಬಲಿಯಾದಂತಹ ಯೇಸುವಿನ ಮರಣವನ್ನು ಸೂಚಿಸುತ್ತದೆ! (1 **ತಿಮೋಥೆ** 2:6) – **"ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು"**


ಈ ಮರಣದಿಂದ ದೇವರ ವಾಕ್ಯ ನೆರವೇರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ಹೋಶೇಯ 13:14**

**"ನಾನು ಅದನ್ನು ಪಾತಾಳದ ಅಧಿಕಾರದಿಂದ ಬಿಡಿಸಲೋ? ಮರಣದಿಂದ ಉದ್ಧರಿಸಲೋ?"**

ಹೌದು! ಆದ್ದರಿಂದ ಕಲ್ವಾರಿ ಶಿಲುಬೆಯಲ್ಲಿ ಯೇಸು ಕ್ರಿಸ್ತನ ಮರಣವು ಮನುಷ್ಯ ಜಾತಿಯ ಮೇಲಿದ್ದ ಮರಣ ದಂಡನೆಯನ್ನು ನಾಶ ಮಾಡಿತು.

ಮನುಷ್ಯ ಜಾತಿಯು ಬಿಡುಗಡೆ ಹೊಂದಿತು ಹೇಗೆಂದರೆ – "ಜೀವಕ್ಕೆ ಜೀವವು" ದೊರೆಯಿತು!

 ಆದ್ದರಿಂದ ನಾವು ಹೀಗೆ ಓದುತ್ತೇವೆ –

**2 ತಿಮೋಥೆ 1:10**

**"ಈಗ ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶ ಪಡಿಸಿದ್ದಾನೆ"**

ಈಗ, **"ಗ್ರೋಟೊ"** ಎಂಬ ಹೆಸರು ಭಯ ಭಕ್ತಿಯಿಂದ ನೆನಪಿಸಿಕೊಳ್ಳುವುದಕ್ಕಾಗಿ ಇರುವ ಸ್ಥಳಕ್ಕೆ ಸೂಚನೆಯಾಗಿದೆ.
ರೋಮನ್ ಕಥೋಲಿಕ್ ಸಭೆಗಳ ಪ್ರಾಕಾರಗಳಲ್ಲಿ ಜನರು ಸ್ಮರಿಸಿ ಪ್ರಾರ್ಥಿಸುವುದನ್ನು ನೋಡಬಹುದು.

ಅದೇ ರೀತಿ ಈ ಗ್ರೊಟೊ ಎಂಬುದು **ಕಲ್ವಾರಿಯ ನಿತ್ಯವಾದ** ಸ್ಮರಣೆಯಾಗಿದೆ ಮತ್ತು **ನಾವು ಜೀವಿಸುವುದಕ್ಕಾಗಿ ನಮ್ಮ ಯಜಮಾನನಾದ ಯೇಸು ಕ್ರಿಸ್ತನು ಕ್ರಿ. ಶ. 33ರ ಏಪ್ರಿಲ್ 3ನೇ ದಿನಾಂಕದಂದು ಸತ್ತನು.**

ನಂತರ ನಾವು ನೋಡುವುದೇನೆಂದರೆ, ಗ್ರೋಟೊ ನಂತರ ಮೇಲೇರುವ ಮಾರ್ಗದಲ್ಲಿ ಎರಡು ದಿಕ್ಕುಗಳು ಕಾಣುತ್ತವೆ.

ಇದು **ಎರಡು ವಿಧವಾದ ರಕ್ಷಣೆಗಳನ್ನು** ಸೂಚಿಸುತ್ತದೆ ಒಂದು **ಪರಲೋಕದ ರಕ್ಷಣೆ** ಮತ್ತು **ಇನ್ನೊಂದು ಭೂಲೋಕದ ರಕ್ಷಣೆ!**

ಇದನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ತಿಮೋಥೆ 1 : 10**

**"ಈತನು ಮರಣವನ್ನು ನಿವೃತ್ತಿ ಮಾಡಿ ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು"**

ಹೌದು! ಎರಡು ಮಾರ್ಗಗಳು ಎರಡು ವಿಧವಾದ ರಕ್ಷಣೆಗಳನ್ನು ಸೂಚಿಸುತ್ತವೆ.

**"ಜೀವ"** – **ಭೂಲೋಕ ರಕ್ಷಣೆ** (1 **ತಿಮೋಥೆ** 2:3,4) ಇದು **ರಾಣಿಯ ಕೋಣೆಗೆ ಸೂಚಿತವಾಗಿದೆ.**

**"ನಿರ್ಲಯತ್ವ"** – **ಪರಲೋಕ ರಕ್ಷಣೆ (ರೋಮಾ** 2:7) ಇದು **ರಾಜನ ಕೋಣೆಗೆ ಸೂಚಿತವಾಗಿದೆ.**


ಗ್ರೋಟೋನಿಂದ ಮೇಲೇರುವ ಮಾರ್ಗ ಹೋಗುತ್ತದೆ. ಮತ್ತು ಇದರ ನಂತರ ಎರಡು ಮಾರ್ಗಗಳು
ಅಥವಾ ದಾರಿಗಳು ಎರಡು ಕೋಣೆಗಳಿಗೆ ಹೋಗುತ್ತದೆ.

ಈಗ ನಾವು ಮುಂದಿನ ದಾರಿಗಳಲ್ಲಿ ಪ್ರವೇಶಿಸಿ ಇವುಗಳ ಬಗ್ಗೆ ಅಭ್ಯಾಸ ಮಾಡೋಣ –

## ದಿ ಗ್ರಾಂಡ್ ಗ್ಯಾಲರಿ

ಒಬ್ಬ ವ್ಯಕ್ತಿಯು **ರಾಜನ ಕೋಣೆಯ** ದಾರಿಯಲ್ಲಿ ಹೋಗುವಾಗ ಆ ವ್ಯಕ್ತಿಯು ಪ್ರವೇಶಿಸುವುದು ಈ **"ಗ್ರಾಂಡ್ ಗ್ಯಾಲರಿ"**ಯ ದಾರಿಯನ್ನು ಇದು ಅತಿ ದೊಡ್ಡ ಪ್ರಮಾಣದ ಮೇಲೇರುವ ದಾರಿಯಾಗಿದೆ.

**ಇದರ ಎತ್ತರ 28 ಅಡಿ ಉದ್ದ 155 ಅಡಿ ಮತ್ತು ಅಗಲ 6 ಅಡಿ ಅತಿ ದೊಡ್ಡದಾದ ಪ್ರದೇಶ!**




ಇದಕ್ಕೆ "ಗ್ರಾಂಡ್ ಗ್ಯಾಲರಿ" ಎಂದು ಸರಿಯಾಗಿ ಹೆಸರು ಇಡಲಾಗಿದೆ. ಪಿರಮಿಡ್‌ನ ಬೇರೆ ಯಾವ ದಾರಿಯಲ್ಲೂ ಇಷ್ಟೊಂದು ದೊಡ್ಡ ಸ್ಥಳವಿಲ್ಲ.

**ಇದು ಏನನ್ನು ಸೂಚಿಸುತ್ತದೆ?**

ಇದು ಈ ಸುವಾರ್ತಾ ಯುಗದಲ್ಲಿನ **"ಪರಲೋಕದ ಕರೆಯುವಿಕೆ"**ಯನ್ನು ಸೂಚಿಸುತ್ತದೆ. **ಇಬ್ರಿಯ** 3:1

**"... ಪರಲೋಕಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ...."**

ಮತ್ತು **"ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು"** **ಗಲಾತ್ಯ** 5:1,13.

ಹೌದು! ಈ **ಗ್ರಾಂಡ್ ಗ್ಯಾಲರಿ** ಎಂಬುದು ಕ್ರೈಸ್ತ ಬೆಳವಣಿಗೆಯ ಮೂರು ಹಂತಗಳಲ್ಲಿನ ಮೊದಲನೇ ಹಂತವಾಗಿದ್ದೂ ಕ್ರಿಸ್ತನ ಕರೆಯುವಿಕೆಯ ಚಿತ್ರಕ್ಕೆ ಯೋಗ್ಯವಾಗಿದೆ. – **"ಕರೆಯುವಿಕೆಯ ಹಂತ"**!

ಇದು ಕ್ರಿಸ್ತನಲ್ಲಿ ನಂಬಿಕೆಯನ್ನು ತೋರಿಸುವ ಹಂತವಾಗಿದೆ ಮತ್ತು ಇಂತಹ ಕ್ರೈಸ್ತರನ್ನು ವಿಶ್ವಾಸಿಗಳು ಎಂದು ಕರೆಯಲಾಗುತ್ತದೆ.

ಬಹುಶಃ ಇಲ್ಲಿನ ಅತಿ ದೊಡ್ಡ ಸ್ವಾತಂತ್ರ್ಯದ ವಿಷಯವೆಂದರೆ ಒಬ್ಬ ವ್ಯಕ್ತಿಯು ತನ್ನ ಪಾಪದಿಂದ ಕ್ಷಮಾಪಣೆ ಹೊಂದುವದು ಮತ್ತು "**ನಂಬಿಕೆಯಿಂದ**" ನೀತಿವಂತರಾಗುವುದರ ಮೂಲಕ **ಪ್ರಾರ್ಥನೆಯಲ್ಲಿ ದೇವರ ಬಳಿಗೆ ಹೋಗುವುದಕ್ಕೆ ಅವಕಾಶವುಂಟಾಗುತ್ತದೆ** ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ರೋಮಾ 5:1

**"ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ"**

ಹೌದು! ನಮ್ಮ ಪಾಪಗಳಿಂದ ಕ್ಷಮಾಪಣೆ ಹೊಂದುವುದಕ್ಕೆ ನಮಗಿರುವ ಮಹಾ ಆಶೀರ್ವಾದ!

**ಈಗ, ಇನ್ನೊಂದು ವಿಷಯವನ್ನು ಗಮನಿಸೋಣ –**

ನಾವು "**ಗ್ರೋಟೊ**" ಮೂಲಕವಾಗಿ "**ಸುರಂಗ ಬಾವಿ**"ಯಿಂದ ಹೋದರೆ ಈ "**ಗ್ರಾಂಡ್ ಗ್ಯಾಲರಿ**"ಯ ಬಾಗಿಲಿಗೆ ಬಂದು ಸೇರುತ್ತೇವೆ. ನಾವು ನೋಡುವುದೇನೆಂದರೆ ಹಿಡಿತವಾದ ಮತ್ತು ಬಾಗಿದ ಸ್ಥಿತಿಯಲ್ಲಿರುವ **ಮೇಲೇರುವು ಮಾರ್ಗವೂ ಸಹ** ಈ ಗ್ರಾಂಡ್ ಗ್ಯಾಲರಿಯ ಬಾಗಿಲಿಗೆ ಬಂದು ಸೇರುತ್ತದೆ.

**ಇದು ಏನನ್ನು ಸೂಚಿಸುತ್ತದೆ?**

ಇದು ಅಪೋಸ್ತಲನಾದ ಪೌಲನು **ಗಲಾತ್ಯ** 3:24ರಲ್ಲಿ ಹೇಳಿರುವ ವಾಕ್ಯಕ್ಕೆ ಸರಿಯಾಗಿ ಸೂಚಿತವಾಗಿದೆ.

**"ಧರ್ಮಶಾಸ್ತ್ರವು ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವುದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ."**

ಹೌದು! ಯೆಹೂದ್ಯರಿಗೆ ಬಂಧನವಾಗಿದ್ದ ಪರಿಪೂರ್ಣ ಧರ್ಮಶಾಸ್ತ್ರವು ಕೆಲವರಲ್ಲಿ ಇದರಿಂದ ಹೊರ ಬರುವುದಕ್ಕೆ ಒಬ್ಬ ರಕ್ಷಕನನ್ನು ಹುಡುಕುವುದಕ್ಕೆ ಕಾರಣವಾಯಿತು – ಮತ್ತು ಆ ದಾರಿಯು ಒಬ್ಬ ವ್ಯಕ್ತಿಯಾದ ಯೇಸುವಿನಲ್ಲಿತ್ತು ಎಂದು ಆತನ ವಾಕ್ಯದಲ್ಲಿ ಓದುತ್ತೇವೆ – **ಮತ್ತಾಯ** 11:28–30

**"ಎಲ್ಲೈ ಕಷ್ಟ ಪಡುವವರೇ, ಹೊರೆ ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು..."**

ಆದ್ದರಿಂದ, ಈ ಹಿಡಿತವಾದ ಸ್ಥಿತಿಯ ಮೊದಲ ಮೇಲೇರುವ ಮಾರ್ಗವು ಯೆಹೂದ್ಯರನ್ನು ಸೂಚಿಸುತ್ತದೆ. ಇವರು "**ಕ್ರಿಸ್ತ ನಂಬಿಕೆಯಲ್ಲಿ**" ಬರುವುದನ್ನು ಈ "**ಗ್ರಾಂಡ್ ಗ್ಯಾಲರಿಗೆ**" ಹೋಗುವ ಮೊದಲ ಮೇಲೇರುವ ಮಾರ್ಗಕ್ಕೆ ಸೂಚಿತವಾಗಿದೆ.

## ಹೌದು! ವಾಸ್ತವಿಕವಾಗಿ ಹೇಳಬೇಕಾದರೆ ಈ "ಗ್ರಾಂಡ್ ಗ್ಯಾಲರಿ"ಗೆ ಮೊದಲನೆಯದಾಗಿ ಪ್ರವೇಶಿಸಿದ್ದು ಯೆಹೂದ್ಯರೇ!

ಮೊದಲ ಬಾರಿ ಯೇಸುವಿನಲ್ಲಿ ನಂಬಿಕೆಯಿಟ್ಟವರು ಇಸ್ರಾಯೇಲ್ ದೇಶದ ಯೆಹೂದ್ಯರು! ಹನ್ನೆರಡು ಅಪ್ಪೋಸ್ತಲರೆಲ್ಲರೂ ಯೆಹೂದ್ಯರು ಮತ್ತು ಪಂಚಶತ್ತಮ ದಿನದಂದು ಮೇಲ್ಬಾವಣಿಯಲ್ಲಿ ಸೇರಿದ್ದ ಉಳಿದ ಶಿಷ್ಯರೆಲ್ಲರು ಯೆಹೂದ್ಯರೇ !

ಈಗ, ಈ "**ಗ್ರಾಂಡ್ ಗ್ಯಾಲರಿಯ**" ಬಗ್ಗೆ ಇನ್ನೂ ಹೆಚ್ಚಾಗಿ ಅಭ್ಯಾಸ ಮಾಡೋಣ –

ಇದು ಏರಿ ಹತ್ತಲು ಕಷ್ಟವಾದ ಮತ್ತು **ಜಾರುವ** ಮಾರ್ಗವಾಗಿದ್ದೂ ಮೇಲೆ ಹತ್ತಲು ಎರಡೂ ಕಡೆಗಳಲ್ಲಿ **"ಗುಂಡಿ"ಗಳನ್ನು ಹಿಡಿತಕ್ಕಾಗಿ ಮಾಡಲಾಗಿದೆ.**

ಇಂದು ಪ್ರವಾಸಿಗಳಿಗಾಗಿ ಹಿಡಿ ಕಂಬಿ (**Hand railing**) ಗಳನ್ನು ಮಾಡಲಾಗಿದೆ. ಆದರೆ ಮೊದಲು ಏರಿ ಹೋಗುವ ದಾರಿಗಳಲ್ಲಿ ಸಣ್ಣಗುಂಡಿಗಳನ್ನು ಮಾಡಲಾಗಿತ್ತು.

ಈ **ಗ್ರಾಂಡ್ ಗ್ಯಾಲರಿಯು** ಮೇಲಿನ ತುದಿಯಲ್ಲಿ "**ಗ್ರೇಟ್ ಸ್ಟೆಪ್**" ಎಂಬ ಸ್ಥಳಕ್ಕೆ ಬಂದು ಸೇರುತ್ತೇವೆ. ಇದು ಒಂದು ವೇದಿಕೆಯ ಸ್ಥಳ ಮತ್ತು ಇದು "**ಆಂಟಿ ಚೇಂಬರ್**" ಕಡೆಗೆ ಕೊಂಡೊಯ್ಯುತ್ತದೆ.

## ಇವೆಲ್ಲಾ ಏನನ್ನು ಸೂಚಿಸುತ್ತದೆ?

ಇದು "**ನೋಡುವವರಾಗಿ**" ನಡೆಯದೆ "**ನಂಬುವವರಾಗಿ**" ನಡೆಯುವ ಒಬ್ಬ ಕ್ರೈಸ್ತನ ಆರಂಭದ ನಡೆಯಾಗಿದೆ.

ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಕೊರಿಂಥ 5 : 7**

**" ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವಾದ್ದರಿಂದ....."**

ಸಮ ಅಳತೆಗಳಲ್ಲಿರುವ ಸಣ್ಣ "ಗುಂಡಿಗಳು" ದೇವರ **ದಿನ ನಿತ್ಯದ ಅನುಗ್ರಹವನ್ನು** ತನ್ನ **ವಾಕ್ಯದ ಮೂಲಕ** ಮತ್ತು **ಅನುಭವಗಳ** ಮೂಲಕ ಒಬ್ಬ "ಕರೆಯಲ್ಪಟ್ಟ" ಕ್ರೈಸ್ತನು ದೇವರ ಯೋಜನೆಗಳ ಜ್ಞಾನದಲ್ಲಿ **ಮುನ್ನೇರುವುದನ್ನು** ಮತ್ತು ದೇವರ ವಾಗ್ದಾನಗಳನ್ನು ಸತ್ಯವೇದದ ಮೂಲಕ ಅಭ್ಯಾಸ ಮಾಡುವುದನ್ನು ಸೂಚಿಸುತ್ತದೆ.

ಈ **"ಗ್ರಾಂಡ್ ಗ್ಯಾಲರಿ"**ಯಲ್ಲಿ ಮೇಲೇರುವ ಸ್ಥಿತಿಯು ಒಬ್ಬ "ವಿಶ್ವಾಸಿಯ" ಬೆಳವಣಿಗೆ ಯನ್ನು ಸೂಚಿಸುತ್ತದೆ. ಇದರಲ್ಲೇ ಮುಂದುವರಿದರೆ, ಅದು ಕ್ರೈಸ್ತನಿಗಿರುವ ಸೌಭಾಗ್ಯ ಗಳ ಬಗ್ಗೆ ತಿಳಿದುಕೊಳ್ಳುವತ್ತ ಮತ್ತು ಕೇವಲ ವಿಶ್ವಾಸಿಯಾಗಿರಲು ಮಾತ್ರವಲ್ಲ, ನಂಬಿಕೆಯಲ್ಲಿ ಮುಂದುವರೆದು ಹಿಂಬಾಲಕರಾಗುವ ಆಹ್ವಾನ ದೊರೆಯುತ್ತದೆ ಎಂದು ಅರ್ಥಮಾಡಿಕೊಳ್ಳುವತ್ತ ನೆಡೆಸುತ್ತದೆ.

**ಫಿಲಿಪ್ಪಿ 1:29 / ರೋಮಾ 12:1 / 1 ಪೇತ್ರ 2:21**

**"ಹೇಗೆಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡುವದೂ ಆತನಿಗೋಸ್ಕರ ಬಾಧೆಯನ್ನನುಭವಿಸುವದೂ ನಿಮಗೆ ಅನುಗ್ರಹವಾಗಿ ದೊರೆಯಿತು"**

**"ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ"**

**"ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ... ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು"**

ಹೌದು! ಕ್ರಿಸ್ತೀಯ ಜೀವನದ ಮುಂದಿನ ಎರಡು ಹಂತಗಳನ್ನು ದಿ ಗ್ರೇಟ್ ಸ್ಟೆಪ್ ಮತ್ತು ಆ್ಯಂಟಿ ಚೇಂಬರ್‌ನಲ್ಲಿ ಸೂಚಿಸಲಾಗಿದೆ!

# ದಿ ಗ್ರೇಟ್ ಸ್ಟೆಪ್ ಮತ್ತು ಆ್ಯಂಟಿ ಚೇಂಬರ್

ಆ್ಯಂಟಿ ಚೇಂಬರ್‌ನ ಪ್ರವೇಶ ದ್ವಾರವು ದಿ ಗ್ರೇಟ್ ಸ್ಟೆಪ್ ಎಂದು ಕರೆಯಲ್ಪಡುವ ವೇದಿಕೆಯಾಗಿದೆ.

ಇದರಿಂದ ಹಿಂದಕ್ಕೆ ನೋಡಿದರೆ ನಮಗೆ ಕಾಣುವ ನೋಟವೆಂದರೆ –

1. ಗ್ರ್ಯಾಂಡ್ ಗ್ಯಾಲರಿಯ ಸಂಪೂರ್ಣ ಹಾದಿ. ಇದು ಒಬ್ಬ ಕ್ರೈಸ್ತನು ಆತನು ತನ್ನ ಕರೆಯುವಿಕೆ ಮತ್ತು ವಿಶ್ವಾಸಿಯಾಗಿ ಆತನ ಜೀವಿತ ಮತ್ತು ಹಾದಿಯುದ್ದಕ್ಕೂ ದೇವರ ಮಾಡಿರುವ ಎಲ್ಲಾ ಮಹೋಪಕಾರಗಳು ಮತ್ತು ಮಾರ್ಗದರ್ಶನಗಳನ್ನು ಹಿಂದಿರುಗಿ ನೋಡಬಹುದು ಎಂಬುದನ್ನು ಸೂಚಿಸುತ್ತದೆ.

2. ಒಬ್ಬರು ಇನ್ನೂ ಕೆಳಗಿರುವ ಮೊದಲನೇ ಮೇಲೇರುವ ದಾರಿಯನ್ನು ಗ್ರಾನೈಟ್ ಪ್ಲಗ್ ನವರೆಗೂ ನೋಡಬಹುದು.

ಇದು ದೇವರು **ಮಹತ್ತಾದ ಅವಕಾಶಕ್ಕಾಗಿ** ಕರೆದಿರುವುದನ್ನು ಆತನು ನೋಡಬಲ್ಲನು ಎಂಬುದನ್ನು ಸೂಚಿಸುತ್ತದೆ. ಇಂತಹ ಅವಕಾಶವು ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರದ ಅಡಿಯಲ್ಲಿ ನೀಡಲಾಗಿರಲಿಲ್ಲ.

**3.** ಒಬ್ಬ ವ್ಯಕ್ತಿಯು ಗ್ರಾಂಡ್ ಗ್ಯಾಲರಿಯ ಪ್ರವೇಶ ದ್ವಾರದ ಬಳಿ ಇರುವ ಸುರಂಗದ **(The Well Shaft)** ದ್ವಾರದಕಿಂಡಿಯನ್ನು ನೋಡಿ, ಹೇಗೆ ತನಗಾಗಿ ಯೇಸು ಈ ಅವಕಾಶವನ್ನು ತೆರೆದನು ಎಂಬುದನ್ನು ನೆನಪು ಮಾಡಿಕೊಳ್ಳಬಹುದು ಮತ್ತು ತಂದೆಯಾದ ದೇವರಿಗೆ **ಪರಿಪೂರ್ಣ ವಿಧೇಯನಾಗಿದ್ದ ಯೇಸುವಿನ ಸ್ವಂತ ಉದಾಹರಣೆಯನ್ನು** ಪರಿಗಣಿಸಿಕೊಳ್ಳಬಹುದು.

**4.** ಮತ್ತು ಕೊನೆಯದಾಗಿ, ಕೆಂಪು ಗ್ರಾನೈಟ್ ಪ್ಲಗ್‌ನ ಹಿಂದೆಯಿರುವ ಇಳಿಜಾರಿನ ಮಾರ್ಗವನ್ನು **(The Descending Passage)** ಕುರಿತು ಯೋಚಿಸಿ ಮನುಷ್ಯ ಜಾತಿಯ ಮೇಲೆ ಹೇಗೂ ಇರುವ ಮರಣ ದಂಡನೆಯನ್ನು ಕುರಿತು ಮನವರಿಕೆ ಮಾಡಿಕೊಳ್ಳಬಹುದು ಮತ್ತು ಕರ್ತನೊಂದಿಗೆ ಸಾಯಲು ತನಗಿರುವ ಮಹಾ ಭಾಗ್ಯವನ್ನು ಕುರಿತು ಮನವರಿಕೆ ಮಾಡಿಕೊಳ್ಳಬಹುದು.

ಇದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ತಿಮೋಥೆ 2:11 - "....ನಾವು ಆತನೊಡನೆ ಸತ್ತಿದ್ದರೆ....."**

ಹೌದು! ಯೇಸುವಿನ **ಹಾಗೆ** ಮತ್ತು **ಅದೇ** ವಿಧದಲ್ಲಿ ಸಾಯುವದು –

**ತ್ಯಾಗದ ಮರಣ!!**

ಆದ್ದರಿಂದ "ಕರೆಯಲ್ಪಟ್ಟ" ಕ್ರೈಸ್ತನು ತನ್ನನ್ನು ಕುರಿತು ತಾನೇ **ನಿರ್ಧಾರ ತೆಗೆದುಕೊಳ್ಳಬೇಕಾದ ಹಂತಕ್ಕೆ ಬರುತ್ತಾನೆ.** ಯೇಸು ಕೆಳಗಿನ ವಾಕ್ಯದಲ್ಲಿ ಹೇಳಿರುವುದನ್ನು ಓದುತ್ತೇವೆ. –

**ಲೂಕ 14:28**

**"ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ ಅವನು ಮೊದಲು ಕೂತುಕೊಂಡು ಅದಕ್ಕೆ ಎಷ್ಟು ಖರ್ಚು ಹಿಡಿದೀತು ಅದನ್ನು ತೀರಿಸುವುದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕ ಮಾಡುವುದಿಲ್ಲವೇ?"**

ಹೌದು! ಇದುವೇ ಆ ದೊಡ್ಡ ಮೆಟ್ಟಿಲನ್ನು **(The Great Step)** ಸೂಚಿಸುತ್ತದೆ!!


## ತೀರ್ಮಾನಿಸುವಂತಹ ಸ್ಥಳ!

ಈಗ ಅಲ್ಲಿಂದ **ರಾಜನ ಕೋಣೆಗೆ (Kings Chamber)** ಮುಂದೆ ಹೋದರೆ ಮೂರು ಮೆಟ್ಟಿಲುಗಳಿವೆ ಇದು ಯೇಸುವನ್ನು ಹಿಂಬಾಲಿಸುವವರೆಲ್ಲರಿಗೂ ಆತನ ವಾಕ್ಯವನ್ನು ಸೂಚಿಸುತ್ತದೆ – **ಮತ್ತಾಯ** 16:24

"ಆತನು ತನ್ನನ್ನು ನಿರಾಕರಿಸಿ..." (1)

"ತನ್ನ ಶಿಲುಬೆಯನ್ನು ಹೊತ್ತುಕೊಂಡು...." (2)

"ನನ್ನ ಹಿಂದೆ ಬರಲಿ......." (3)




ಮುಂದಿನ ಪುಟದಲ್ಲಿ ತೋರಿಸಿರುವ ಚಿತ್ರದಲ್ಲಿರುವಂತೆ ಒಬ್ಬ ವ್ಯಕ್ತಿಯು ಆಂಟಿ ಚೇಂಬರ್‌ನಲ್ಲಿ ಮೂರು ಸಾರಿ ಬಗ್ಗಿ ನಡೆಯಬೇಕು.
ಇದು ಏನನ್ನು ಸೂಚಿಸುತ್ತದೆಂದು ಮುಂದೆ ನೋಡೋಣ –

**1.** ಮೊದಲನೆಯ ಸಾರಿ ಬಗ್ಗಿ ನಡೆಯುವುದು **"ತನ್ನನ್ನು ತಾನು ನಿರಾಕರಿಸಿವಂತಹ"** ಹಂತವನ್ನು ಸೂಚಿಸುತ್ತದೆ. ದೇವರ ಚಿತ್ತವನ್ನು ಅಂಗೀಕರಿಸಿಕೊಳ್ಳುವುದಕ್ಕೆ ಮೊದಲು ಭೂಲೋಕದ ಎಲ್ಲಾ ನಿರೀಕ್ಷೆ ಮತ್ತು ಮಹತ್ವಾಕಾಂಕ್ಷೆಗಳನ್ನು ಸ್ವಇಚ್ಛೆಯಿಂದ ಪಕ್ಕಕ್ಕೆ ಇಡಬೇಕು (**ರೋಮಾ** 12:2)

"ಇಹಲೋಕದ ನಡವಳಿಕೆಯನ್ನು ಅನುಸರಿಸದೆ...."

ಇದು ಸತ್ಯವೇದದಲ್ಲಿರುವ **ಒಂದೇ ಸ್ನಾನದೀಕ್ಷೆಯನ್ನೂ** ಸಹ ಸೂಚಿಸುತ್ತದೆ. **ಎಫೆಸದವರಿಗೆ** 4:5 ಮತ್ತು ನೀರಿನಲ್ಲಿ ಮುಳುಗುವುದರ ಮೂಲಕ ಪ್ರತಿಷ್ಟೆ ಮಾಡಿಕೊಂಡ ಪ್ರತಿಜ್ಞೆಗೆ ಸೂಚಿತವಾಗಿದೆ. ಲೌಕಿಕ ಜೀವನ ಮತ್ತು ನಿರೀಕ್ಷಣೆಯನ್ನು ತ್ಯಾಗ ಮಾಡುವುದಕ್ಕೆ **ಸೂಚಿತವಾಗಿದೆ.**

**2.** ಒಬ್ಬ ವ್ಯಕ್ತಿಯು ಮೊದಲನೆಯ ಸಾರಿ ಬಗ್ಗಿ ನಡೆದ ನಂತರ ಸುಮಾರು **21** ಇಂಚುಗಳ ಜಾಗದಲ್ಲಿ ನಿಂತಾಗ ಎದುರುಗಡೆಯಲ್ಲಿ "ರೆಡ್ ಗ್ರಾನೈಟ್ ಲೀಪ್" ಎಂಬ ಸ್ಥಳ ಸಿಗುತ್ತದೆ. ಹಾಗೂ ಇದರ ಕೆಳಗೆ ಬಗ್ಗಿ ನಡೆಯಬೇಕಾಗುತ್ತದೆ

### ಈ "ರೆಡ್ ಗ್ರಾನೈಟ್ ಲೀಫ್" ಎಂದರೇನು?

ಇದು **ದೇವರ ದೈವೀಕ ಚಿತ್ತವನ್ನು ಸೂಚಿಸುತ್ತದೆ.** ಒಬ್ಬ ಕ್ರೈಸ್ತನು(ಳು) ತನ್ನ ಸ್ವಂತ ಚಿತ್ತವನ್ನು ನಿರಾಕರಿಸಿದ **ನಂತರ** "ಶಿಲುಬೆಯನ್ನು" ದೇವರ ಚಿತ್ತವೆಂದು ತಿಳಿದುಕೊಂಡು ಹೊತ್ತುಕೊಳ್ಳುತ್ತಾನೆ(ಳೆ).!

ಹೌದು! ಈ ರೆಡ್ ಗ್ರಾನೈಟ್ ಲೀಫ್‌ನ ಕೆಳಗೆ ಬಗ್ಗಿ ನಡೆಯುವವನು ಈ ಕೆಳಗಿನ ವಾಕ್ಯಕ್ಕೆ **ವಿಧೇಯನಾಗುವುದಕ್ಕೆ** ಸೂಚಿತವಾಗಿದೆ.

**ಮತ್ತು ತನ್ನ ಶಿಲುಬೆಯನ್ನು ಹೊತ್ತುಕೊಂಡು**

ಹೌದು! ಇಲ್ಲೇ **ನಿಜವಾದ** ಪ್ರತಿಷ್ಟೆ ಪಡಿಸುವ ಕಾರ್ಯ ನಡೆಯುತ್ತದೆ – ಇದನ್ನು ತ್ವರಿತ ಪಡಿಸುವ ಹಂತ ಎಂದು ಕರೆಯಲಾಗುತ್ತದೆ.


**3.** ಕೆಳಗೆ "ಬಗ್ಗಿ" ನಡೆದ ನಂತರ ಅಥವಾ ರೆಡ್ ಗ್ರಾನೈಟ್ ಲೀಫ್‌ನ ಕೆಳಗೆ ಬಾಗಿ ನಡೆದ ನಂತರ ವಿಶಾಲ ಸ್ಥಳವಾದ ಆಂಟಿ ಚೇಂಬರ್‌ಗೆ ಬಂದು ಸೇರುತ್ತಾನೆ(ಳೆ). ಈ ಸ್ಥಳವು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಸಮರ್ಪಿತವಾದ **ಒಬ್ಬ ನೂತನ ಸೃಷ್ಟಿಯಾದ ಕ್ರೈಸ್ತನ(ಳ)** ಜೀವಿತವನ್ನು ಸೂಚಿಸುತ್ತದೆ.

ಅಥವಾ ಯೇಸುವನ್ನು, ಯೇಸುವಿನ ಬೋಧನೆಗಳು, ಆತನ ಉದಾಹರಣೆಗಳು ಮತ್ತು ಆತನ ಮರಣವನ್ನು ಸಹ "ಹಿಂಬಾಲಿಸುವಂತಹ" **ಸಂಪೂರ್ಣವಾಗಿ ಪ್ರತಿಷ್ಠೆ ಮಾಡಿಕೊಂಡವರನ್ನು ಸೂಚಿಸುತ್ತದೆ.** ಮರಣದೊಳಗೆ ಹೋಗುವುದಕ್ಕೆ ಸೂಚಿತವಾಗಿರುವ ಈ ಮೂರನೇ ಸಾರಿ ಬಗ್ಗಿ ನಡೆಯುವುದರ ನಂತರ ಸಿಗುವುದೇ **ರಾಜನ ಕೋಣೆ.**

# ರಾಜನ ಕೋಣೆ

ಇದು ಮೂರು ಕೋಣೆಗಳಲ್ಲಿ **ಎತ್ತರವಾದ** ಕೋಣೆಯಾಗಿದೆ. ಮತ್ತು ಇದು ಪೂರ್ಣವಾಗಿ **ಕೆಂಪು ಗ್ರಾನೈಟ್‌ನಿಂದ** ಮಾಡಲಾಗಿದೆ ಮತ್ತು ಅದರಲ್ಲಿರುವ ಒಂದೇ ಒಂದು ವಸ್ತುವೇನೆಂದರೆ – **ತೆರೆದ ಖಜಾನೆ** !

**ದೇವರು ಇಂತಹ ದೊಡ್ಡ ವಿಷಯವನ್ನು ಬಹಳ ಸರಳ ಮಾಡಿದ್ದಾರೆ !**




ಈ ರಾಜನ ಕೋಣೆಯು ದೇವರು ಮನುಷ್ಯನಿಗೆ ಕೊಡುವಂತಹ **ಉನ್ನತವಾದ ಜೀವನವನ್ನು** ಸೂಚಿಸುತ್ತದೆ.

ಈ "ಕೆಂಪು ಗ್ರಾನೈಟ್" ಸಂಪೂರ್ಣವಾಗಿ ಏನೋ ಒಂದು ದೈವೀಕ ವಾದದ್ದನ್ನು ಸೂಚಿಸುತ್ತದೆ!

ಹೌದು! ಈ ರಕ್ಷಣೆಯು ಒಂದು **ಪರಲೋಕದ ರಕ್ಷಣೆಯಾಗಿದೆ.** ಕರ್ತನಾದ ಯೇಸುವನ್ನು ಹಿಂಬಾಲಿಸುವ ಎಲ್ಲಾ ನಂಬಿಗಸ್ಥರು ಈ **ದಿವ್ಯ ಸ್ವಭಾವವನ್ನು** ಪಡೆದು ಕೊಳ್ಳುತ್ತಾರೆ ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ

**2 ಪೇತ್ರ 1:4 / ಪ್ರಕಟನೆ 2:10**

**"ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನುಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ."**

" ...ನೀನು ಸಾಯಬೇಕಾದರೂ ನಂಬಿಗಸ್ಥನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು...."

**ಮುಚ್ಚಳವಿಲ್ಲದೆ ಇರುವ ಈ ತೆರೆದ ಖಜಾನೆಯ (Open Coffer) ಅರ್ಥವೇನು?**

ಯಾರು ದಿವ್ಯ ಸ್ವಭಾವವನ್ನು ಹೊಂದುತ್ತಾರೆ ಅವರು ಅಮರರಾಗುತ್ತಾರೆ ಎಂಬುದಕ್ಕೆ ಇದು ಸಮರ್ಥವಾದ ಸೂಚನೆಯಾಗಿದೆ!

**ಪ್ರಕಟನೆ** 20:6 -

"ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನೂ ಪರಿಶುದ್ಧನೂ ಆಗಿದ್ದಾನೆ. ಇಂಥವರ ಮೇಲೆ ಎರಡನೆಯ ಮರಣಕ್ಕೆ ಅಧಿಕಾರವಿಲ್ಲ......"

ಹೌದು! ಅವರ ಮೇಲೆ ಮರಣದ ಯಾವ ಅಧಿಕಾರವೂ ಇರುವುದಿಲ್ಲ!

ಇದು **ನಿರ್ಲಯತ್ವವನ್ನು** ಹೊಂದುವಂತಹ ಸ್ವಭಾವವಾಗಿದೆ ಮತ್ತು ಮರಣಕ್ಕೆ ಇವರ ಮೇಲೆ ಅಧಿಕಾರ ನಡೆಸುವ ಯಾವ ಸಾಧ್ಯತೆಯೂ ಇರುವುದಿಲ್ಲ! – **ರೋಮಾ 2:7, 1 ಕೊರಿಂಥ 15:53,54**

ಇದನ್ನು **ಮೊದಲು** ಪಡೆದವರು ಯೇಸು – **ಪ್ರಕಟನೆ 1:18. ಯೋಹಾನ 5:26** ಮತ್ತು ಆತನ ಶರೀರದ ಎಲ್ಲಾ ಅಂಗದವರಾದ ಸಭೆಯು **ಇಂತಹ ಜೀವ ಸ್ವಭಾವವನ್ನು ಪಡೆಯುವರು**

ಆದ್ದರಿಂದ, ಇದೇ **"ಈ ಅತ್ಯಂತ ವಿಶೇಷ ರಕ್ಷಣೆ"** – **ಇಬ್ರಿಯ 2:3** ಈ ಸುವಾರ್ತಾ ಯುಗದಲ್ಲಿ ಯೇಸುವಿನ ಹೆಜ್ಜೆಜಾಡನ್ನು ಮರಣ ಪರ್ಯಂತ ನಂಬಿಗಸ್ಥಿಕೆಯಿಂದ ಹಿಂಬಾಲಿಸುವವರಿಗೆ ಇರುವ ವಾಗ್ದಾನವಾಗಿದೆ.

**ಈಗ, ಉಳಿದ ಮನುಷ್ಯ ಜಾತಿಯ ಬಗ್ಗೆ ಏನು?**

**ಯೇಸು ಇಡೀ ಲೋಕಕ್ಕೆ ಸಹ ರಕ್ಷಕನಲ್ಲವೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**1 ಯೋಹಾನ 2:2 / 1 ತಿಮೋಥೆ 2:5,6**

"ಆತನು ನಮ್ಮ ಪಾಪಗಳನ್ನು ನಿವಾರಣ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣ ಮಾಡುತ್ತಾನೆ"

"ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ;
ಅತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಚಮಯಗಳಲ್ಲಿ ಹೇಳಬೇಕಾದಸಾಕ್ಷಿಯು."

## ಈ ಲೋಕಕ್ಕೂ ರಕ್ಷಣೆ ಇದೆಯೇ?

ಹೌದು! ರಕ್ಷಣೆ ಇದೆ! ಇದನ್ನು ಕುರಿತು – **ಯೋಹಾನ 10:16 / 11:26** ರಲ್ಲಿ ಓದುತ್ತೇವೆ.

**ಯೋಹಾನ** 10:16 - "ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನೂ ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು...."

**ಯೋಹಾನ** 11:26 - "ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನೂ ಎಂದಿಗೂ ಸಾಯುವುದಿಲ್ಲ..."

ಹೌದು! ಇದು ಲೋಕದ ಜನರು ತಾವು "ಬದುಕಿರುವಾಗ" ಅಥವಾ ಪುನರುತ್ಥಾನದಲ್ಲಿ ಜೀವಂತವಾಗಿ ಎದ್ದು ಯೇಸು ಕ್ರಿಸ್ತನಲ್ಲಿ ನಂಬಿಕೆ ಇಡುವಾಗ ದೊರಕುವ ರಕ್ಷಣೆಯನ್ನು ಕುರಿತು ಇರುವ ಸೂಚನೆಯೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥ 15:22**

ಅದೇ ಪ್ರಕಾರ ಕ್ರಿಸ್ತನ ಸಂಭಂದದಿಂದ ಎಲ್ಲರೂ ಜೀವಿತರಾಗುವರು


## ಈ ಲೋಕ ರಕ್ಷಣೆಯನ್ನು ಸಹ ಮಹಾ ಪಿರಮಿಡ್‌ನಲ್ಲಿ ತೋರಿಸಲಾಗಿದೆ!

ನೆನಪಿಡಿರಿ, ಸುರಂಗವು **(Well Shaft)** ಎರಡು ಮಾರ್ಗಕ್ಕೆ ಕೊಂಡೊಯ್ಯುತ್ತದೆ.

– ಒಂದು ದಿ ಗ್ರಾಂಡ್ ಗ್ಯಾಲರಿಗೆ ಮತ್ತು ಎರಡು ಸಮತಲವಾದ ಮಾರ್ಗ **(Horizontal Passage)**

ಈಗ ನಾವು ಸಮತಲವಾದ ಮಾರ್ಗದಲ್ಲಿ ಪ್ರವೇಶಿಸೋಣ –

# ಸಮತಲವಾದ ಮಾರ್ಗ




ಈ ಮಾರ್ಗವು ಗ್ರಾಂಡ್ ಗ್ಯಾಲರಿಯ ದ್ವಾರದಿಂದ ಆರಂಭಗೊಳ್ಳುತ್ತದೆ ಮತ್ತು "ಸುರಂಗ" ಮಾರ್ಗದ ಕಡೆಯಿಂದ **(Well Shaft)** ಹೋಗಿ **ರಾಣಿಯ ಕೋಣೆಗೆ** ಸೇರುತ್ತದೆ.

ಈ ಮಾರ್ಗದ **ಎತ್ತರದಲ್ಲಿ ಒಂದು ವಿಶಿಷ್ಟತೆ** ಇದೆ!
ಇದು ಹೇಗೆಂದು ನೋಡೋಣ –

ಒಂದು ವೇಳೆ ಈ **ಸಮತಲವಾದ ಮಾರ್ಗದ** ಉದ್ದವನ್ನು ಏಳು ಭಾಗವಾಗಿ ವಿಭಾಗಿಸಿದರೆ ಮೊದಲ **6/7** ಭಾಗದ ಮಾರ್ಗದ ಎತ್ತರವು **46.5** ಇಂಚುಗಳು ಇರುವದೆಂದು ನೋಡುತ್ತೇವೆ ಮತ್ತು ಒಬ್ಬ ವ್ಯಕ್ತಿಯು ಇಲ್ಲಿ ಬಗ್ಗಿ ಮುನ್ನಡೆಯಬೇಕು ಆದರೆ ಕೊನೆಯ **1/7** ಭಾಗದಲ್ಲಿ ಎತ್ತರವು **20** ಇಂಚುಗಳು ಅಧಿಕವಾಗಿದೆ. ಅಂದರೆ ಇಲ್ಲಿ ಇದರ ಎತ್ತರವು **66.5** ಇಂಚುಗಳು ಮತ್ತು ಇಲ್ಲಿಂದ ಮುಂದೆ ಒಬ್ಬ ವ್ಯಕ್ತಿಯು **ನೇರವಾಗಿ ನಿಂತು** ಆರಾಮವಾಗಿ ನಡೆಯಬಹುದು.

**ಇದರ ಅರ್ಥವೇನು ಅಥವಾ ಇದು ಏನನ್ನು ಸೂಚಿಸುತ್ತದೆ?**

ಇದು ಆದಾಮನು ಪಾಪದಲ್ಲಿ ಬಿದ್ದುಹೋದ ದಿನದಿಂದ ಸಾವಿರ ವರ್ಷಗಳ ಅವಧಿ **(1000 ವರ್ಷಗಳು)** ಮುಗಿಯುವವರೆಗೂ ಮನುಷ್ಯ ಜಾತಿಗಾಗಿ ಇರುವ **ದೇವರ ದೈವೀಕ ಯೋಜನೆಯನ್ನು** ಸೂಚಿಸುತ್ತದೆ ಇದು **7000 ವರ್ಷಗಳ ಅವಧಿ** ಎಂದು

ಸತ್ಯವೇದವು ನಮಗೆ ಬೋಧಿಸುತ್ತದೆ –

**ಯೋಬನು 5:19**

**“ಆರು ಇಕ್ಕಟ್ಟುಗಳಿಂದ ಆತನು ನಿನ್ನನ್ನು ಬಿಡಿಸುವನು; ಏಳನೆಯ ಇಕ್ಕಟ್ಟು ಉಂಟಾದರೂ ಯಾವ ಕೇಡೂ ನಿನ್ನನ್ನು ಮುಟ್ಟದು.”**

ಈ ವಾಕ್ಯದಲ್ಲಿ ಆಳವಾದ ಸೂಚಿತ ಕಾರ್ಯಗಳಿರುವುದರಿಂದ ನಾವು ಮುಂಬರುವ ಅಭ್ಯಾಸಗಳಲ್ಲಿ ಇದನ್ನು ವಿವರವಾಗಿ ನೋಡಲಿದ್ದೇವೆ.

ಆದರೆ, ಮನುಷ್ಯನ ರಕ್ಷಣೆಗಾಗಿ ಈ **7000** ವರ್ಷಗಳ ದೇವರ ದೈವೀಕ ಯೋಜನೆಯು ಸತ್ಯವೇದದ ಬೋಧನೆಯ ಮೂಲತತ್ವವಾಗಿದೆ. ಇದೇ ವಿಷಯವನ್ನು **ದಾನಿಯೇಲ 4:32** ಮತ್ತಷ್ಟು ಧೃಢಪಡಿಸುತ್ತದೆ

ಇದರಲ್ಲಿ ರಾಜನಾದ ನೆಬೂಕದ್ನೇಚ್ಚರನು ತನ್ನ ಬುದ್ಧಿ ಮತ್ತು ಮಹಿಮೆಯನ್ನು ಮತ್ತೆ ಸ್ವಾಧೀನ ಮಾಡಿಕೊಳ್ಳುವ ಮೊದಲು **“ಏಳು ಕಾಲಗಳವರೆಗೆ ದನಗಳಂತೆ”** ಹುಲ್ಲು ಮೇಯುತ್ತಾ ಇದ್ದನು. ಇಲ್ಲಿ ರಾಜನಾದ ನೆಬೂಕದ್ನೆಚ್ಚರನು ಈ ಭೂಮಿಗೆ ಮೊದಲ ರಾಜನಾದ ಆದಾಮನನ್ನು (ಮತ್ತು ಎಲ್ಲಾ ಮನುಕುಲವನ್ನು) ಚಿತ್ರಿಸುತ್ತಾನೆ.

ಮತ್ತು ಈ ಆದಾಮನು ಆ ಮಹಿಮೆಯನ್ನು ಕಳೆದುಕೊಂಡನು ಮತ್ತು ಅವನು ಹೊಂದಿದ ವಾಗ್ಧಾನ ಏನೆಂದರೆ– ದೇವರ ಕೃಪೆಯಿಂದ ಮತ್ತು ದೇವರ ತಕ್ಕ ಕಾಲದಲ್ಲಿ ಆದಾಮ ಮತ್ತು ಆತನ ಮೂಲಕವಾಗಿ ಬಂದ ಆತನ ಸಂತತಿಯು ಹಿಂದೆ ಇದ್ದ ಮಹಿಮೆಯನ್ನು ಮತ್ತು ಅದಕ್ಕೂ ಮಿಗಿಲಾದದ್ದನ್ನು ಪಡೆದುಕೊಳ್ಳುವರು!

ಮೊದಲ **6000** ವರ್ಷಗಳು **ಪಾಪ ಮತ್ತು ಮರಣದ ದಾಸತ್ವ ಮತ್ತು ನೊಗದಲ್ಲಿರುತ್ತದೆ**

.....ಆರು ಇಕ್ಕಟ್ಟುಗಳು.

ಆದರೆ, ದೇವರ ಯೋಜನೆಯಲ್ಲಿ 1000 ವರ್ಷಗಳ ಕಾಲವಿರುತ್ತದೆ. ಈ ಕಾಲದಲ್ಲಿ ಮನುಷ್ಯನು

**“ದೇವರ ಸ್ವರೂಪ ಮತ್ತು ಹೋಲಿಕೆಯನ್ನು”** ಮತ್ತೆ **ಹಿಂದಕ್ಕೆ ಪಡೆದುಕೊಳ್ಳುವರು.**

**(ಆದಿಕಾಂಡ 1:26)**

**“...ಏಳನೆಯ ಇಕ್ಕಟ್ಟು ಉಂಟಾದರೂ ಯಾವ ಕೇಡೂ ನಿನ್ನನ್ನು ಮುಟ್ಟದು”**

ಹೌದು! ಇದೇ ರೀತಿಯಲ್ಲಿಯೇ ದೇವರು ಆದಾಮನನ್ನು ಮೂಲತಃವಾಗಿ ಸೃಷ್ಟಿಮಾಡಿದ್ದನು!

ಹೌದು! ಕೆಳಗಿನ ವಾಕ್ಯದಲ್ಲಿ ಮನುಷ್ಯ ಜಾತಿಗೆ ಭವಿಷ್ಯದಲ್ಲಿನ ದೇವರ ವಾಗ್ದಾನವನ್ನು ಓದಿ ನೋಡಿರಿ

**ಯೆಶಾಯ 13:12** – "....ಮನುಷ್ಯರನ್ನು ಅಪರಂಜಿಗಿಂತಲೂ ಮಾನವರನ್ನು ಓಫೀರಿನ ಬಂಗಾರಕ್ಕಿಂತಲೂ ಅಪರೂಪವಾಗುವಂತೆ ಮಾಡುವೆನು"

**ಯೋಬನು 23:10** – "ಆತನಾದರೋ ನನ್ನ ದಾರಿಯನ್ನು ಬಲ್ಲನು, ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು."

ಹೌದು! ಇಲ್ಲಿ ಬಂಗಾರವು ಈ ಅನುಭವಗಳಿಂದ ಮನುಷ್ಯ ಜಾತಿಯು ಬೆಳೆಸಿಕೊಳ್ಳುವಂತಹ ಗುಣಲಕ್ಷಣವನ್ನು ಸೂಚಿಸುತ್ತದೆ!

ಸಮತಲ ಮಾರ್ಗದ ಕೊನೆಯ 1/7 ಭಾಗವು **1000** ವರ್ಷಗಳ "**ಯೇಸು ಕ್ರಿಸ್ತನ ರಾಜ್ಯ**"ವನ್ನು ಸೂಚಿಸುತ್ತದೆ. – **ಎಫೆಸ** 5:5 ಎಲ್ಲಾ ಮನುಷ್ಯ ಜಾತಿಯು ಅನುಭವದ ಮೂಲಕ ದೇವರ ಆಜ್ಞಾವಿಧಿಗಳಿಗೆ ವಿಧೇಯರಾಗುವದರಿಂದ ದೊರಕುವ ಸಂತೋಷವನ್ನು ಕಲಿತುಕೊಳ್ಳುವರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 2:3

"**ಹೊರಟು ಬಂದ ಬಹುಜನಾಂಗದವರು - ಬನ್ನಿರಿ, ಯೆಹೋವನ ಪರ್ವತಕ್ಕೆ ಯಾಕೋಬ್ಯರ ದೇವರ ಮಂದಿರಕ್ಕೆ ಹೋಗೋಣ!....**"

ಮತ್ತೆ ನಾವು ಹೀಗೆ ಓದುತ್ತೇವೆ –

## ಜೆಕರ್ಯ 8:22

"**ಹೀಗೆ ಬಹು ದೇಶಗಳವರೂ ಬಲವಾದ ಜನಾಂಗಗಳವರೂ ಯೆರೂಸಲೇಮಿನಲ್ಲಿ ಸೇನಾಧೀಶ್ವರನಾದ ಯೆಹೋವನನ್ನು ಆಶ್ರಯಿಸುವುದಕ್ಕೂ ಯೆಹೋವನ ಪ್ರಸನ್ನತೆಯನ್ನು ಬೇಡುವುದಕ್ಕೂ ಬರುವರು**"

ಈ ಕಾಲಾವಧಿಯಲ್ಲಿಯೇ ಎಲ್ಲರೂ ತಮ್ಮ ಸೃಷ್ಟಿ ಕರ್ತನನ್ನು ತಿಳಿದುಕೊಳ್ಳುವ, ಅರಿತುಕೊಳ್ಳುವ ಮತ್ತು ಪ್ರೀತಿಸುವ ಅವಕಾಶವನ್ನು ಹೊಂದುವರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


### ಕೀರ್ತನೆ 22:27,28

"ಭೂಮಂಡಲದವರೆಲ್ಲರೂ ಎಚ್ಚರಗೊಂಡು ಯೆಹೋವನ ಕಡೆಗೆ ತಿರುಗಿಕೊಳ್ಳುವರು; ಎಲ್ಲಾ ಜನಾಂಗಗಳವರು ನಿನಗೆ ಅಡ್ಡಬೀಳುವರು. ರಾಜ್ಯವು ಯೆಹೋವನದೇ; ಎಲ್ಲಾ ಜನಾಂಗಗಳಿಗೂ ಆತನೇ ಒಡೆಯನು."

ಹೌದು! ಕೊನೆಯದಾಗಿ ನಾವು ರಾಣಿಯ ಕೋಣೆಯನ್ನು ಪ್ರವೇಶಿಸುತ್ತೇವೆ –

## ರಾಣಿಯ ಕೋಣೆ

ಈ ಕೋಣೆಯು ಪೂರ್ತಿಯಾಗಿ ಬಿಳಿಬಣ್ಣದ ಕಲ್ಲಿನಿಂದ ಮಾಡಲಾಗಿದೆ. ಮತ್ತು ಇದು ಸಮತಲವಾದ ಮಾರ್ಗದ ಅಂತಿಮ ತಾಣವಾಗಿದೆ.




ಇಲ್ಲಿಯವರೆಗೂ ವಿವರಿಸಿರುವ ಮಹಾ ಪಿರಮಿಡ್‌ನ ಮೂರನೇ ಕೋಣೆಯು ಇದಾಗಿದೆ.

**ರಾಜನ ಕೋಣೆಯು "ಪರಲೋಕ ರಕ್ಷಣೆಯನ್ನು"** ಸೂಚಿಸುತ್ತದೆ ಎಂದು ನೋಡಿದೆವು.

**ಕುಳಿಯುಳ್ಳ ಕೋಣೆಯು ಆದಾಮನ ಮರಣದಂಡನೆಯನ್ನು** ಅಥವಾ "ಎಲ್ಲರೂ" ಮರಣದಂಡನೆಯೊಂದಿಗೆ ಹುಟ್ಟಿರುವುದನ್ನು ಸೂಚಿಸುತ್ತದೆ. 1 **ಕೊರಿಂಥ** 15:22

ಈ ರಾಣಿಯ ಕೋಣೆಯು "ಭೂಮಿಯ ರಕ್ಷಣೆಯನ್ನು ಸೂಚಿಸುತ್ತದೆ.

ಇದು ದೇವರ ರಾಜ್ಯದಲ್ಲಿ ಯೇಸು ಕ್ರಿಸ್ತನ ಮೂಲಕ ಎಲ್ಲಾ ಮನುಷ್ಯ ಜಾತಿಗೆ ದೇವರು ಇಟ್ಟಿರುವ ರಕ್ಷಣೆಯಾಗಿದೆ.

**ರೋಮಾ 6:23**

**"...ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ."**

"ಬಿಳಿ ಸುಣ್ಣದ ಕಲ್ಲು" ಕ್ರಿಸ್ತನ ರಾಜ್ಯದ ಸಾವಿರ ವರ್ಷದ ಕೊನೆಯಲ್ಲಿ ಎಲ್ಲಾ ಮನುಷ್ಯ ಜಾತಿಯು ಹೊಂದುವಂತಹ **ಪರಿಶುದ್ಧತೆ** ಮತ್ತು **ಪರಿಪೂರ್ಣತೆಯನ್ನು** ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

1 **ಕೊರಿಂಥ** 15:24 - **"ಆ ಮೇಲೆ ಆತನು ಬೇರೆ ಎಲ್ಲಾ ದೊರೆತನವನ್ನೂ ಎಲ್ಲಾ ಅಧಿಕಾರವನ್ನೂ ಬಲವನ್ನೂ ನಿವೃತ್ತಿ ಮಾಡಿ ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿ ಕೊಡುವಾಗ ಸಮಾಪ್ತಿ"**

## ಮತ್ತು ಈ ರಕ್ಷಣೆಯಲ್ಲಿ ಏನೇನು ಇರುತ್ತದೆ?

ಈ ರಕ್ಷಣೆಯಲ್ಲಿ ವಿಧೇಯರಾಗುವ ಎಲ್ಲಾ ಮನುಷ್ಯ ಜಾತಿಗೂ ಈ "ಭೂಮಿಯ ರಾಜ್ಯ"ವನ್ನು ಕೊಡಲಾಗುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ** 25:34 –**"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧ ಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ"**

ಆದಾಮನು ತಾನು ಸೃಷ್ಟಿಸಲ್ಪಟ್ಟಾಗ ಈ "ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ" ಹೊಂದಿದ್ದನು – ಕೀರ್ತನೆ 8:5 ಮತ್ತು ಆತನು ಪಾಪ ಮಾಡಿದಾಗ ಅದನ್ನು ಕಳೆದುಕೊಂಡನು.

ಇದಲ್ಲದೆ ಇದು **ಮರಣವಿಲ್ಲದ, ಕಷ್ಟಗಳಿಲ್ಲದ** ಮತ್ತು **ಕಣ್ಣೀರಿಲ್ಲದ ಸ್ಥಿತಿಯೆಂದು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಪ್ರಕಟನೆ 21:4

"ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು, ಇನ್ನು ಮರಣವಿರುವುದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವುದಿಲ್ಲ"

ಹೌದು! ಎಲ್ಲಾ ಮನುಷ್ಯ ಜಾತಿಯು ಉಲ್ಲಾಸ ಪಡುವಂತಹ ರಕ್ಷಣೆ ಇದೇ ಎಂಬುದನ್ನು ಕೆಳಗಿನ ಪ್ರವಾದನಾ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 25:9

" ಆ ದಿನದಲ್ಲಿ ಜನರು ಆಹಾ, ಈತನೇ ನಮ್ಮ ದೇವರು ನಮ್ಮನ್ನು ರಕ್ಷಿಸಲಿ ಎಂದು ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ; ಈತನೇ ಯೆಹೋವನು, ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ ಈತನ ರಕ್ಷಣೆಯಲ್ಲಿ ಆನಂದಿಸಿ ಉಲ್ಲಾಸ ಪಡುವೆವು"

**ಆದ್ದರಿಂದ, ಇದೇ ಸತ್ಯವೇದದಲ್ಲಿ ಬರೆದಿರುವ ಹಾಗೂ ಕಲ್ಲಿನಲ್ಲಿ ದಾಖಲಾಗಿರುವ ದೇವರ ಮಹಾ ದೈವೀಕ ಯೋಜನೆಯಾಗಿದೆ. ಇದು ಸೇನಾಧೀಶ್ವರನಾದ ಯೆಹೋವನಿಗೆ "ಗುರುತಾಗಿಯೂ" ಸ್ತಂಭವಾಗಿಯೂ "ಸಾಕ್ಷಿಯಾಗಿಯೂ" ಮತ್ತು ಯಜ್ಞಪೀಠವಾಗಿಯೂ ಇದೆ.**

**ಯೆಶಾಯ** 19:19,20 ರಲ್ಲಿರುವ ದೇವರ ವಾಕ್ಯವು ಗಿಜಾವಿನ ಮಹಾ ಪಿರಮಿಡ್‌ನಲ್ಲಿ ನೆರವೇರುವುದನ್ನು ನೀವು ಒಪ್ಪಿಕೊಳ್ಳುತ್ತೀರಿ ಎಂದು ನಾವು ಧೃಡವಾಗಿ ನಂಬಿದ್ದೇವೆ.

ಇದರೊಂದಿಗೆ ಲಗತ್ತಿಸಿರುವ ನಕ್ಷೆಯಲ್ಲಿ ದೇವರ ದೈವೀಕ ಯೋಜನೆಯ ವಿವಿಧ ಯುಗಗಳು ಮತ್ತು ಮೂರು ಲೋಕಗಳು ಮೂರು ಮಾರ್ಗಗಳನ್ನು ತೋರಿಸಲಾಗಿದೆ. –

ಅಗಲವಾದ ದಾರಿ, ಇಕ್ಕಟ್ಟಾದ ದಾರಿ ಮತ್ತು ರಾಜ ಮಾರ್ಗ.

ಮುಕ್ತಾಯವಾಗಿ ಈ ಗಿಜಾವಿನ ಮಹಾ ಪಿರಮಿಡ್ ಏಳು ಹಳೆಯ ಅದ್ಭುತಗಳಲ್ಲಿ ಒಂದಾಗಿದೆ ಮತ್ತು ಕಳೆದ 4000

ವರ್ಷಗಳಲ್ಲಿ ಉಳಿದಿರುವುದು ಇದೊಂದೇ ಒಂದು ಮತ್ತು **ಈಗಿನ ಆಧುನಿಕ ಏಳು ಅದ್ಭುತಗಳಲ್ಲಿ ಇದೂ ಸಹ** ಒಂದು.


ಮತ್ತು **ಎಂದೆಂದಿಗೂ ಅದ್ಭುತವಾಗಿ ಉಳಿದು.. (ಯೆರೇಮೀಯ** 32:2)

ಮನುಕುಲದ ರಕ್ಷಕನೂ, ಸೃಷ್ಟಿಕರ್ತನೂ, ಮಹಾ ವಾಸ್ತುಶಿಲ್ಪಿಯೂ ಆದ ಯೆಹೋವನ ಭಯಂಕರ ಮಹಿಮೆಯನ್ನು
ಪ್ರಕಟಿಸುತ್ತದೆ. **"ಆತನ ಮಹತ್ತು ಅಪಾರವಾದದ್ದು"** ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.


**ಯೆಹೋವನು ಮಹೋನ್ನತನು ಮಹಾಸ್ತುತಿ ಪಾತ್ರನೂ ಆಗಿದ್ದಾನೆ; ಆತನ ಮಹತ್ತು ಅಪಾರವಾದದ್ದು.**

ನಿಜವಾಗಿಯೂ, ನಾವೆಲ್ಲರೂ ಇದಕ್ಕೆ ಹೇಳೋಣ....

"ಆಮೆನ್"



For Private Circulation Only




NOT FOR SALE

For more Subjects contact: MESSENGERS OF CHRIST  E-mail: thekingdom1_6@yahoo.com